ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 78

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಶನಿವಾರ: 28-02-2026



**SEHRI & IFTARI TIME**

DAY SATURDAY

RAMZAN : 10

DATE: 28.02.2026

END TIME OF SEHRI :5:24 AM

FAJAR AZAAN : 5:29 AM

IFTAR TIME : 6:30 PM

ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ ಕಾರ್ಯದರ್ಶಿಗಳು : ಮತ್ ವಾಲೆ ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626


## ಜಿಲ್ಲೆಯಲ್ಲಿ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ: ತ್ರೀವ ಕಣ್ಗಾವಲು

**ರಾಯಚೂರು ಫೆ,27–** 2025–26 ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಇಂದಿನಿಂದ (ಫೆ.28) ಆರಂಭವಾಗಿದ್ದು, ಮಾರ್ಚ್ 17ವರೆಗೆ ನಡೆಯಲಿದೆ. ಜಿಲ್ಲೆಯಲ್ಲಿ 43 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಶಿಕ್ಷಣ ಇಲಾಖೆ ಮತ್ತು ಎಕ್ಸಾಂ ಬೋರ್ಡ್ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಂಡಿದೆ. 22,442 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, 18,419 ಹೊಸ ವಿದ್ಯಾರ್ಥಿಗಳು, 3,450 ಪುನರಾವರ್ತಿತ ವಿದ್ಯಾರ್ಥಿಗಳು, 560 ಖಾಸಗಿ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ (ದ್ವಿತೀಯ) ಪರೀಕ್ಷೆ ಬರೆಯಲಿದ್ದಾರೆ.

ಪರೀಕ್ಷಾ ಅಕ್ರಮ ತಡೆಗೆ ಎರಡನೇ ಬಾರಿಗೆ ವೆಬ್ ಕಾಸ್ಟಿಂಗ್ ಕಣ್ಗಾವಲು ಇರಲಿದ್ದು, ಪರೀಕ್ಷಾ ಕೊಠಡಿಯೊಳಗೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮೊಬೈಲ್, ಎಲೆಕ್ಟ್ರಾನಿಕ್ ವಾಚ್, ಕ್ಯಾಲುಕೇಟರ್ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಾಲಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ಕೆಎಸ್ ಆರ್ ಟಿಸಿ ಸಾಮಾನ್ಯ ಬಸ್ ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶವನ್ನು ಸರ್ಕಾರ ದಿಂದ ಮಾಡಿಕೊಟ್ಟಿದೆ.

**ಪರೀಕ್ಷಾ ನಿಯಮಗಳು.?** ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರದ 200 ಮೀಟರ್ ನಿಷೇಧಾಜ್ಞೆ, ಪಿಯುಸಿ ಎಕ್ಸಾಂ



ಎಲ್ಲಾ ಕೇಂದ್ರಗಳಲ್ಲೂ ಸಿಸಿ ಕ್ಯಾಮರಾ, ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ ಇರಲಿದೆ. ಪರೀಕ್ಷಾ ಕೇಂದ್ರದ ಸುತ್ತ ಜೆರಾಕ್ಸ್, ಸೈಬರ್ ಸೆಂಟರ್, ಕಂಪ್ಯೂಟರ್ ಸೆಂಟರ್ ಮುಚ್ಚಬೇಕು. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪೊಲೀಸ್ ಭದ್ರತೆ ವ್ಯವಸ್ಥೆ. ಪ್ರಶ್ನೆ ಪತ್ರಿಕೆ ಲೀಕ್ ಮಾಡುವ, ಅಕ್ರಮ ಮಾಡುವವರ ವಿರುದ್ಧ ಕ್ರಮ. ಪ್ರಶ್ನೆ ಪತ್ರಿಕೆ ರವಾನೆ ಮಾಡೋದ್ರೀಂದ ಹಿಡಿದು ಪರೀಕ್ಷಾ ಕೇಂದ್ರಕ್ಕೆ ತೆರಳೋವರೆಗೂ ಕ್ಯಾಮೆರಾ ರೆಕಾರ್ಡ್. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ವಾಚ್, ಎಲೆಕ್ಟ್ರಾನಿಕ್ ಉಪಕರಣಗಳು ನಿಷೇಧ ಮಾಡಲಾಗಿದೆ.

**ಪರೀಕ್ಷೆ ಕೇಂದ್ರಗಳು:** ರಾಯಚೂರಿನಲ್ಲಿ ಆರ್.ಪಿ.ಎಸ್. ಪ.ಪೂ.ಕಾಲೇಜ್, ಬಾಲಕರ ಸ.ಪ.ಪೂ.ಕಾಲೇಜ್, ಬಾಲಕಿಯರ ಸ.ಪ.ಪೂ. ಕಾಲೇಜ್, ಟ್ಯಾಗೋರ್ ಸ್ಮಾರಕ ಪ.ಪೂ.ಕಾಲೇಜ್, ಹಮ್ದರ್ದ ಪ.ಪೂ.ಕಾಲೇಜ್, ವಿಧ್ಯಾಭಾರತಿ ಪ.ಪೂ. ಕಾಲೇಜ್, ಬಾಲಕಿಯರ ಸ.ಪ.ಪೂ.ಕಾಲೇಜ್, ಇನ್ಫಂಟ್ ಜೇಸಸ್ ಪ.ಪೂ.ಕಾಲೇಜ್, ಪ್ರಮಾಣ ಪ.ಪೂ.ಕಾಲೇಜ್, ವಿದ್ಯಾನಿಧಿ ಪ.ಪೂ.ಕಾಲೇಜ್, ಜವಾಹರನಗರ ಪ.ಪೂ.ಕಾಲೇಜ್, ಅಲ್-ಕರೀಮ್ ಪ.ಪೂ.ಕಾಲೇಜ್, ಎಸ್.ಎಸ್.ಆರ್.ಜಿ ಪ.ಪೂ.ಕಾಲೇಜಿನಲ್ಲಿ ನಡೆಯಲಿವೆ.

ಲಿಂಗಸುಗೂರು ತಾಲೂಕಿನಲ್ಲಿ ನಲ್ಲಿ ಸರ್ಕಾರಿ ಪ.ಪೂ.ಕಾಲೇಜ್ ಲಿಂಗಸುಗೂರು, ಸರ್ಕಾರಿ ಪ.ಪೂ.ಕಾಲೇಜ್ ಮುದಗಲ್ಲ, ಸರ್ಕಾರಿ ಪ.ಪೂ.ಕಾಲೇಜ್ ಹಟ್ಟಿ, ಶ್ರೀಬಸವೇಶ್ವರ ಪ.ಪೂ.ಕಾಲೇಜ್ ಲಿಂಗಸೂಗುರು, ವಿ.ಸಿ.ಇ.ಎಸ್ ಪ.ಪೂ.ಕಾಲೇಜ್ ಲಿಂಗಸೂಗುರು, ಶ್ರೀಮತಿ ಎಚ್.ಎಸ್.ಗೌಡ ಪ.ಪೂ.ಕಾಲೇಜ್ ಲಿಂಗಸೂಗುರು, ಶರಣಪ್ಪಮೇಟಿ ಪ.ಪೂ.ಕಾಲೇಜ್ ಲಿಂಗಸುಗೂರಿನಲ್ಲಿ ನಡೆಯಲಿವೆ. ದೇವದುರ್ಗದಲ್ಲಿ ಬಾಲಕರ ಸ.ಪ.ಪೂ.ಕಾಲೇಜ್, ಬಾಲಕಿಯರ ಸ.ಪ.ಪೂ.ಕಾಲೇಜ್, ಬಸವ ಪ.ಪೂ, ಎಸ್.ಕೆ.ಎಂ ಪ.ಪೂ ಹಾಗೂ ಜ್ಞಾನಜ್ಯೋತಿ ಪ.ಪೂ.ಕಾಲೇಜಿನಲ್ಲಿ ನಡೆಯಲಿವೆ. ಸಿಂಧನೂರಿನಲ್ಲಿ ಬಾಲಕರ ಸ.ಪ.ಪೂ.ಕಾಲೇಜ್, ಶ್ರೀಬಸವೇಶ್ವರ, ಆರ್.ಜಿ.ಎಮ್, ಶ್ರೀಕನಕದಾಸ, ಸಂಕೇತ, ಎವಿಎಸ್ 2ನೇಪುಟಕ್ಕೆ►

## ಪದವಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾ ತಯಾರಿ' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ



ಧೈರ್ಯದ ದಾರಿ

**ಸಿರವಾರ:ಫೆ.27–** ಸ್ಥಳೀಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಪದವಿ ವಿದ್ಯಾರ್ಥಿಗಳಿಗಾಗಿ "ವರ್ತಮಾನ ಕಾಲದಲ್ಲಿ ಪರೀಕ್ಷೆಗಳ ತಯಾರಿ" ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವು ಕಾಲೇಜಿನ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು.

**ಕಾರ್ಯಕ್ರಮದ ಮುಖ್ಯಾಂಶಗಳು:**

**ಉದ್ಘಾಟನೆ:** ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ಶ್ರೀ ಚುಕ್ಕಿಸುಗಪ್ಪ ಸೌಕಾರ್ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

"ವಿದ್ಯಾರ್ಥಿಗಳು ಪರೀಕ್ಷೆಯನ್ನು ಭಯದಿಂದ ನೋಡದೆ, ಒಂದು ಹಬ್ಬದಂತೆ ಸಂಭ್ರಮಿಸಬೇಕು. ಸಾಹಿತ್ಯದ ಓದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕ," ಎಂದು ಅವರು ಈ ಸಂದರ್ಭದಲ್ಲಿ ಹಿತವಚನ ನುಡಿದರು.

**ವಿಶೇಷ ಉಪನ್ಯಾಸ:** ಬೆಂಗಳೂರು ನ್ಯೂಸ್‌ನ ದಿಕ್ಸೂಚಿ ಸಂಪಾದಕ ರಾದ ಶ್ರೀ ಎ. ಟಿ. ಪಾಟೀಲ್ ಅವರು ಮುಖ್ಯ ಉಪನ್ಯಾಸಕರಾಗಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

**ಉಪನ್ಯಾಸದ ಪ್ರಮುಖ ಅಂಶಗಳು:**

ಶ್ರೀ ಎ. ಟಿ. ಪಾಟೀಲ್ ಅವರು ಪ್ರಸ್ತುತ ಸ್ಪರ್ಧಾತ್ಮಕ ಯುಗದಲ್ಲಿ ಪರೀಕ್ಷೆಗಳನ್ನು ಎದುರಿಸುವ ಕುರಿತು ಕೆಲವು ಪ್ರಮುಖ ಸೂತ್ರಗಳನ್ನು ಹಂಚಿಕೊಂಡರು:

**ಸಮಯ ಪ್ರಜ್ಞೆ:** ದಿನದ 24 ಗಂಟೆಗಳನ್ನು ಓದು, ವಿಶ್ರಾಂತಿ ಮತ್ತು ಪುನರ್ಮನನಕ್ಕಾಗಿ ಹೇಗೆ ಸಮರ್ಪಕವಾಗಿ ಹಂಚಿಕೊಳ್ಳಬೇಕು ಎಂಬುದನ್ನು ವಿವರಿಸಿದರು.

**ತಂತ್ರಜ್ಞಾನದ ಬಳಕೆ:** ಮೊಬೈಲ್ ಮತ್ತು ಅಂತರ್ಜಾಲವನ್ನು ಕೇವಲ ಮನೋರಂಜನೆಗೆ ಬಳಸದೆ, ಜ್ಞಾನಾರ್ಜನೆಗೆ ಪೂರಕವಾಗಿ ಬಳಸಿಕೊಳ್ಳುವಂತೆ ಕಿವಿಮಾತು ಹೇಳಿದರು.

**ಏಕಾಗ್ರತೆ:** ಪರೀಕ್ಷಾ ಸಮಯದಲ್ಲಿ ಕಾಡುವ ಒತ್ತಡವನ್ನು ನಿವಾರಿಸಿಕೊಂಡು, ಆತ್ಮವಿಶ್ವಾಸದಿಂದ ಉತ್ತರ ಬರೆಯುವ ಕಲೆಗಳನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು.

**ಸಮಾರೋಪ:** ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಬೋಧಕ ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಉಪನ್ಯಾಸಕರೊಂದಿಗೆ ಸಂವಾದ ನಡೆಸುವ ಮೂಲಕ ತಮ್ಮ ಪರೀಕ್ಷಾ ಭಯವನ್ನು ನಿವಾರಿಸಿಕೊಂಡರು.ಈ ಸಂದರ್ಭದಲ್ಲಿ ಚುಕ್ಕಿ ಸೂಗಪ್ಪ ಸಾಹುಕಾರ, ಸಭೆಯ ಅಧ್ಯಕ್ಷತೆಯನ್ನು ಶ್ರೀ ಮೌನೇಶ ಹಿರೇಹಣಗಿ, ಅಧ್ಯಕ್ಷರು ಕಸಾಪ ಸಿರವಾರ ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ,ಪ. ಪಂ. ಅಧ್ಯಕ್ಷರಾದ ಹಾಜಿ ಚೌದ್ರಿ,ಮಾಜಿಅಧ್ಯಕ್ಷರಾದ ಭೂಪನಗೌಡ,ಕೋಶಧ್ಯಕ್ಷರಾದ ನಾಗಪ್ಪ ಪತ್ತಾರ, ಡಾ. ಹನುಮಂತ ಕೊರಾಪುರ್, ವೆಂಕಟರೆಡ್ಡಿ ಬಲ್ಕಲ್, ಯೇಸುಮಿತ್ರ, ಅಮರೇಶ ದಿನ್ನಿ ಉಪಸ್ಥಿತರಿದ್ದರು.

## ತ್ರಿಚಕ್ರ ವಾಹನವನ್ನು ವಿತರಣೆ



ಧೈರ್ಯದ ದಾರಿ

**ರಾಯಚೂರು ಫೆ,27–** ಕಾರ್ಮಿಕ ಇಲಾಖೆಯ ವತಿಯಿಂದ ವಿವಿಧ ಕಂಪನಿಗಳು, ಕೈಗಾರಿಕೆಗಳು ಹಾಗೂ ಇತರೇ ವಾಣಿಜ್ಯ ಸಂಸ್ಥೆಗಳ ಪ್ರಾಯೋಜಕತ್ವದ ಮತ್ತು ಸಹಯೊಗದೊಂದಿಗೆ ಕಾರ್ಮಿಕ ಸಚಿವರು ಸಂತೋಷ ಲಾಡ್ ಅವರು ಫೆ.27ರಂದು ರಾಜ್ಯದಾದ್ಯಂತ ಅರ್ಹ ವಿಕಲಚೇತನರಿಗೆ ಮೋಟಾರ್ ಸಹಿತ ತ್ರಿಚಕ್ರ ವಾಹನಗಳನ್ನು ವಿತರಿಸಲು ಕಾರ್ಯಕ್ರಮದ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ರಾಯಚೂರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ರಾಯಚೂರು ಇವರ ವತಿಯಿಂದ ಕು॥ಮಾರೆಮ್ಮ ತಂದೆ ಮಾರೆಪ್ಪ ಇವರಿಗೆ ತ್ರಿಚಕ್ರ ವಾಹನವನ್ನು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ಆರತಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀದೇವಿ, ರಾಯಚೂರಿನ 1 ಹಾಗೂ 2ನೇ ಕಾರ್ಮಿಕ ನಿರೀಕ್ಷಕರಾದ ಕುಮಾರಿ ಪ್ರಿಯಾಂಕ, ಮೆ॥ ಪವರ್‌ಮೆಕ್ ಪ್ರಾಜೆಕ್ಟ್ ಲಿಮಿಟೆಡಿನ ಹೆಚ್.ಆರ್. ಮನೋಜ ಸೇರಿದಂತೆ ಕಾರ್ಮಿಕ ಇಲಾಖೆಯ ಸಿಬ್ಬಂದಿಗಳು ಇದ್ದರು.

## ತಿಪ್ಪೆಗೆ ಬಿಸಾಕಿದ ಔಷಧಿಗಳು ಆರೋಗ್ಯ ಇಲಾಖೆಗೆ ಸಂಬಂಧಿಸಿಲ್ಲ: ಡಿಎಚ್‌ಒ ಡಾ.ಸುರೇಂದ್ರ ಬಾಬು

ಧೈರ್ಯದ ದಾರಿ

**ರಾಯಚೂರು ಫೆ,27–** ಇತ್ತೀಚಿಗೆ ನಗರದ ಚಂದ್ರಬಂಡಾ ರಸ್ತೆಯ ಜಲಾಲ್‌ನಗರ ಬಡಾವಣೆ ಬಳಿಯ ತಿಪ್ಪೆಯಲ್ಲಿ ಪತ್ತೆಯಾದ ಔಷಧಿಗಳು ಕುರಿತು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ರಾಯಚೂರಲ್ಲಿ ಅವಧಿ ಇರುವ ಲಕ್ಷಾಂತರ ರೂಪಾಯಿ ಮೌಲ್ಯದ ಔಷಧಿಗಳು ತಿಪ್ಪೆಗೆ ಬಿಸಾಕಿದ ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ಎನ್ನುವ ವಿಷಯವು ಪ್ರಕಟವಾಗಿದ್ದು, ಈ ಸುದ್ದಿಯು ಆರೋಗ್ಯ ಇಲಾಖೆಗೆ ಸಂಭಂದಿಸಿರುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಸ್ಪಷ್ಟಿಕರಣ ನೀಡಿದ್ದಾರೆ.

ಫೆ.22ರಂದು ರಾಯಚೂರಲ್ಲಿ ಅವಧಿ ಇರುವ ಲಕ್ಷಾಂತರ ರೂಪಾಯಿ ಮೌಲ್ಯದ ಔಷಧಿಗಳು ತಿಪ್ಪೆಗೆ ಬಿಸಾಕಿದ ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ಎನ್ನುವ ವಿಷಯವು ಪ್ರಕಟವಾಗಿರುತ್ತದೆ. ಈ ವಿಷಯದ ಗಂಭೀರತೆ ಅನ್ವಯ ತಕ್ಷಣ ಈ ಕುರಿತು ತನಿಖಾ ತಂಡವನ್ನು ರಚನೆ ಮಾಡಲಾಯಿತು.

ತಂಡವು ಔಷಧಿ ಪತ್ತೆಯಾದ ಸ್ಥಳದಲ್ಲಿ ಹಾಗೂ ಎಲ್ಲ ಔಷಧಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತದೆ. ಅಂತಿಮ ವರದಿಯ ಪ್ರಕಾರ ಚಂದ್ರಬಂಡಾ ರಸ್ತೆಯ ಜಲಾಲ್‌ನಗರ ಬಡಾವಣೆ ಬಳಿ ಬಿಸಾಕಿರುವ ಸಿರಿಂಜ್‌ಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧ ಪಟ್ಟಿರುವುದಿಲ್ಲ. ಅಲ್ಲದೆ ಕೆಲವೊಂದು ಸಿರಪ್, ಟಾನಿಕ್ಸ್ ಬಾಟಲ್ಸ್ ಗಳು ಸಿಕ್ಕಿದ್ದು, ಈ ವಸ್ತುಗಳು ಫೀಜಿಷಿಯನ್ ಸ್ಯಾಂಪಲ್ ಇರುವುದು ಕಂಡುಬಂದಿದ್ದು, ಈ ಔಷಧಿಗಳೆಲ್ಲವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಿಲ್ಲವೆಂದು ಪ್ರಾಥಮಿಕ ವರದಿಯಲ್ಲಿ ತಿಳಿಸಲಾಗಿದೆ.

ಈ ಕುರಿತು ಸಹಾಯಕ ಔಷಧ ನಿಯಂತ್ರಕ ಅಧಿಕಾರಿಗಳು ಕಚೇರಿ ಹಾಗೂ ಪರಿಸರ ಮಾಲಿನ್ಯ ಇಲಾಖೆ ವತಿಯಿಂದ ಮುಂದಿನ ಕ್ರಮ ತೆಗೆದುಕೊಳ್ಳುವವರು ಎಂದು ವರದಿಯಲ್ಲಿ ತಿಳಿಸಲಾಗಿದ್ದು, ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಸುದ್ದಿಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿರುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ಸ್ಪಷ್ಟೀಕರಣವನ್ನು ನೀಡಿದ್ದಾರೆ.

## ಮಯೂರಶೀಲೆ ನಾಡೋತ್ಸವ ಎತ್ತುಗಳಿಂದ 1.5 ಟನ್ ಕಲ್ಲು ಎಳೆಯುವ ಸ್ಪರ್ಧೆಗೆ ಎ.ಪಾಪರೆಡ್ಡಿ ಚಾಲನೆ



ಧೈರ್ಯದ ದಾರಿ

**ಸಿರವಾರ :** ಇಂದಿನ ಅಧುನಿಕ ಯುಗದಲ್ಲಿ ಗ್ರಾಮೀಣ ಪರಂಪರೆ ಸಾಂಸ್ಕೃತಿಕ ಆಚರಣೆ ಮುಂದುವರೆಯಬೇಕಾದರೆ ಗ್ರಾಮೀಣ ಸ್ಪರ್ಧೆಗಳನ್ನು ಇನ್ನೂ ಹೆಚ್ಚು ಹೆಚ್ಚು ಆಯೋಜಿಸಬೇಕು ಎಂದು ಮಾಜಿ ಶಾಸಕರಾದ ಎ.ಪಾಪರೆಡ್ಡಿ ಹೇಳಿದರು.

ತಾಲೂಕಿನ ನವಲಕಲ್ ಮಯೂರಶಿಲೆ ನಾಡೋತ್ಸವ–2026 ಅಂಗವಾಗಿ ಎತ್ತುಗಳಿಂದ ಕಲ್ಲು ಎಳ್ಳೆಯುವ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರಿಕೆಟ್ ಮತ್ತು ಆನ್‌ಲೈನ್ ಗೇಮ್ ಸೇರಿದಂತೆ ಇತರೆ ಅಧುನಿಕ ಆಟಗಳ ಪ್ರಭಾವದಲ್ಲಿ ಗ್ರಾಮೀಣ ಯುವಕರು ಗ್ರಾಮೀಣ ಸೋಗಡಿನ ಆಟಗಳನ್ನು ಮರೆಯಬಾರದು. ಗ್ರಾಮೀಣ ಹಬ್ಬಗಳು ಜನರ ಆರೋಗ್ಯದ ಪರಿಣಾಮ ಬೀರಿದ್ದವು ಅನ್ನದಾತನಿಗೆ ಇಂತಹ ಕ್ರೀಡೆಗಳನ್ನು ಆಯೋಜನೆ ಮಾಡುವ ಮೂಲಕ ಪ್ರೋತ್ಸಾಹಿಸಬೇಕು. ಕ್ರೀಡಾಸ್ಪೂರ್ತಿಯಿಂದ ಆಡಿ, ಎತ್ತುಗಳಿಗೆ ಹೊಡೆಯಬೇಡಿ ಎಂದು ಹೇಳಿದರು.

ತಾಲ್ಲೂಕಿನ ವಿವಿಧೆಡೆಯಿಂದ ಆಗಮಿಸಿದ್ದ ಎತ್ತಿನ ಜೋಡಿಗಳು 1.5 ಟನ್ ಕಲ್ಲು ಎಳೆಯುವ ಮೂಲಕ ಸಾಮರ್ಥ್ಯವನ್ನು ಪ್ರದರ್ಶಿಸಿದವು. ಸುಡು ಬಿಸಿಲನ್ನು ಲೆಕ್ಕಿಸದೇ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಜನ ಕೇಕೆ ಹಾಕಿ ಎತ್ತುಗಳ ಬಲ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡಿದರು.

ಶ್ರೀಮಠದ ಅಭಿನವ ಸೋಮನಾಥ ಶಿವಾಚಾರ್ಯರು, ಕಲ್ಲೂರು ಬಸವರಾಜ ನಾಯಕ, ಜೆಡಿಎಸ್ ಎಸ್ ಸಿ ಘಟಕ ತಾಲೂಕ ಅದ್ಯಕ್ಷ ಪರಮೇಶ ನಾಯ್ಕ್, ಕಾ.ಪ.ಸಂಘ ತಾಲೂಕ ಅದ್ಯಕ್ಷ ಹನುಮೇಶ, ಉಪಾದ್ಯಕ್ಷ ಮಹ್ಮದ ಅಲಿ, ವೀರಭದ್ರಯ್ಯಸ್ವಾಮಿ ಸುರೇಶ ಸ್ವಾಮಿ,,ವಿ.ಸುನೀಲ ಕುಮಾರ ನಿಲೋಗಲ್ ಕ್ಯಾಂಪ್. ದೊಡ್ಡ ಹನುಮಂತ ನಾಯಕ, ಮಲ್ಲಯ್ಯನಾಯಕ, ಡಿ.ಯಮನೂರು, ಶಾಂತಪ್ಪ ಪಿತಗಲ್ ಸೇರಿದಂತೆ ಇನ್ನಿತರರು ಇದ್ದರು.

## ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪ್ರಕರಣ ದಾಖಲು

**ಯಾದಗಿರಿ,ಫೆ.27:** ಅಪ್ರಾಪ್ತ ಬಾಲಕಿ ಜೊತೆಗೆ ಅನುಚಿತ ವರ್ತನೆ ಆರೋಪ ಹಿನ್ನೆಲೆಯಲ್ಲಿ ಮಹಲ್ ರೋಜಾ ಯಮನೂರಪ್ಪ ಮುತ್ಯಾ ಮಠದ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪ್ರಕರಣ ದಾಖಲಾಗಿದೆ.ರಾಜ್ಯ ಮಕ್ಕಳ ಹಕ್ಕುಗಳ ಆಯೋಗದಲ್ಲಿ ಸ್ವಯಂಪ್ರೇರಿತ ದೂರು ದಾಖಲಾಗಿದೆ.ಅಪ್ರಾಪ್ತ ಬಾಲಕಿ ಜೊತೆಗೆ ಸ್ವಾಮೀಜಿಯ ಅನುಚಿತ ವರ್ತನೆ ಕುರಿತು ವಿಡಿಯೋ ವೈರಲ್ ಆಗಿತ್ತು.ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲ್ ರೋಜಾ ಗ್ರಾಮದಲ್ಲಿ ಘಟನೆ ನಡೆದಿತ್ತು ಎನ್ನಲಾಗಿದೆ.ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆದ ಹಿನ್ನೆಲೆ ಚರ್ಚೆಗೆ ಗ್ರಾಸವಾಗಿತ್ತು.ಈ ಬೆನ್ನಲ್ಲೇ ಮಕ್ಕಳ ಹಕ್ಕುಗಳ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ.



ಕರ್ನಾಟಕ ಮಾತ್ರವಲ್ಲದೆ ಆಂಧ್ರ, ತೆಲಂಗಾಣ, ಮಹಾರಾಷ್ಟ್ರದಲ್ಲೂ ಅಪಾರ ಭಕ್ತರನ್ನ ಸ್ವಾಮೀಜಿ ಹೊಂದಿದ್ದಾರೆ

# ರವಿಯಂತೆ ಬೆಳಗಿದ ರಾಮನ್



**ಮೊ**ದಲಿಗೆ ನನ್ನೆಲ್ಲಾ ಆತ್ಮೀಯ ಓದುಗರಿಗೆಲ್ಲರಿಗೂ ರಾಷ್ಟ್ರೀಯ ವಿಜ್ಞಾನ ದಿನದ ಶುಭಾಶಯಗಳು, ಸರ್ ಸಿ.ವಿ. ರಾಮನ್ ಎಂದ ತಕ್ಷಣ ನಮಗೆಲ್ಲ ನೆನಪಾಗುವುದು ನೈಸರ್ಗಿಕ ವಿದ್ಯಮಾನಗಳಲ್ಲಿ ಒಂದಾದ ಅಚ್ಚರಿ ಈ ಬೆಳಕು. ಸಿ ವಿ ರಾಮನ್ ರವರು ಏಷ್ಯಾದ ಮತ್ತು ಭಾರತದ ಮೊದಲ ಭೌತವಿಜ್ಞಾನದ ನೊಬೆಲ್ ಪ್ರಶಸ್ತಿ ಪುರಸ್ಕೃತರು. ಚಂದ್ರಶೇಖರ್ ಐಯರ್ ಮತ್ತು ಪಾರ್ವತಿ ಅಮ್ಮಾಳ್ ಇವರ ದ್ವಿತೀಯ ಪುತ್ರರಾಗಿ 1888 ನವೆಂಬರ್ 07 ರಂದು ತಮಿಳುನಾಡಿನ ತಿರುಚಿನಾಪಳ್ಳಿಯ ತಿರುವಾನೈಕಾವಲ್ ನಲ್ಲಿ ಜನಿಸಿದರು.

ರಾಮನ್ ಅವರ ವಿದ್ಯಾಭ್ಯಾಸವು ವಿಶಾಖಪಟ್ಟಣದಲ್ಲಿ ಪೂರ್ಣಗೊಳಿಸಿದರು, ವಿಶಾಖಪಟ್ಟಣಕ್ಕೆ ಬಂದ ಮೇಲೆ ಕೆಲವು ವರ್ಷಗಳು ವಾಲ್ಟೇರಿಗೂ ವಿಶಾಖಪಟ್ಟಣಕ್ಕೂ ನಡುವೆ ಇರುವ ಸಮುದ್ರ ತೀರದಲ್ಲಿ ರಾಮನ್ ಕುಟುಂಬ ವಾಸಿಸುತ್ತಿತ್ತು, ನಂತರ ಲೋಕ ಸುಂದರಿ ಅಮ್ಮಾಳ್ ಅವರನ್ನು ವಿವಾಹಗೊಂಡರು. ರಾಮನ್ ರವರು ಬಿ.ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ರಾಮನ್ ಅದೇ ಕಾಲೇಜಿನಲ್ಲಿ ಎಂ.ಎ ಪದವಿಗಾಗಿ ಶ್ರಮಿಸಿ ದೊಡಗಿದರು. ಆದರೆ ಇವರಿಗೆ ವಿಜ್ಞಾನ ಸಂಶೋಧನೆಗಳಿಗಾಗಿ ಅವರ ಮನಸ್ಸು ಆತುರೆಯುತ್ತಿದ್ದಿತ್ತು ಪಾಠಕ್ರಮದಲ್ಲಿದ್ದ ಪ್ರಯೋಗಗಳನ್ನು ಬಿಟ್ಟು ಅನ್ವೇಷಣ ಕಾರ್ಯದಲ್ಲಿ ತೊಡಗಲು ಅವರು ಬಹಳ ಉತ್ಸುಕರಾಗಿದ್ದರು. ಒಂದು ಸಲ ಸ್ಪೆಕ್ಟ್ರೋಮೀಟರ್ ನಲ್ಲಿ ಪ್ರಯೋಗಗಳನ್ನು ಮಾಡುತ್ತಿರುವಾಗ ಇವರಿಗೆ ಕೆಲವು ವಿಚಿತ್ರ ವಿಷಯಗಳು ಹೊಳೆಯಲು ಆರಂಭಿಸಿತು. ಇದು ಇವರ ವೈಜ್ಞಾನಿಕ ಸಂಶೋಧನೆಯ ಮೊದಲ ಮೆಟ್ಟಿಲು. ಈ ವಿಷಯದ ಮೇಲೆ ಸಂಶೋಧನಾ ಯುಕ್ತವಾದ ಲೇಖನವೊಂದು ವಿಲಾಯತಿಯ ವೈಜ್ಞಾನಿಕ ಮಾಸ ಪತ್ರಿಕೆಯಲ್ಲಿ ಪ್ರಕಟವಾಯಿತು ಇದು ಅತ್ಯಂತ ಮಹತ್ವಪೂರ್ಣವಾಗಿದ್ದು ಸುಪ್ರಸಿದ್ಧ ಲಾರ್ಡ್ ರಿಲೇ ರವರು ತಾವೇ ಒಂದು ಪತ್ರವನ್ನು ರಾಮನ್ ಅವರಿಗೆ ಬರೆದು ಪ್ರೋತ್ಸಾಹಿಸಿದರು ಅಲ್ಲಿಂದ ರಾಮನ್ ರವರ ಪ್ರತಿಭೆ ವಿಕಸಿತವಾಯಿತು ಅಲ್ಲಿಂದ ಅಸಂಖ್ಯಾತ ಪುಸ್ತಕಗಳನ್ನು ಬರೆದರು ಅದರಲ್ಲಿ ರಾಮನ್ ಪರಿಣಾಮವನ್ನು ಸ್ಪಷ್ಟ ಪಡಿಸುವುದು ಸುಲಭವಲ್ಲ ಅದನ್ನು ಕಂಡುಹಿಡಿದವರು ರಾಮನ್ ರು ಅದನ್ನು ತಿಳಿಸುವ ಶಕ್ತಿಯು ಅವರೊಬ್ಬರಲ್ಲಿ ಮಾತ್ರವೇ ಇದ್ದೀತು. ಆ ಸಂದರ್ಭದಲ್ಲಿ ಅದನ್ನು ತಿಳಿದುಕೊಳ್ಳುವುದು ಕೆಲವರಿಗೆ ಮಾತ್ರ ಸಾಧ್ಯವಾಗಿತ್ತು. ರಾಮನ್ ಪರಿಣಾಮ ವಿಜ್ಞಾನದ ಒಂದು ಅಪಾರ ಕ್ಷೇತ್ರ ಅದರಲ್ಲಿ ಪ್ರವೇಶಿಸಬೇಕಾದರೆ ರಾಮನ್ ರಷ್ಟೇ ಜ್ಞಾನವನ್ನು ಪಡೆದಿರುವುದು ಅವಶ್ಯಕ ವಿಜ್ಞಾನದ ಶಾಖೆಯಾದ ಭೌತಶಾಸ್ತ್ರವು ಇನ್ನು ಮುಂದಕ್ಕೆ ಅನೇಕ ಅನ್ವೇಷಣೆಗಳನ್ನು ಮಾಡುವುದಕ್ಕೆ ವಿಶಾಲವಾದ ಕ್ಷೇತ್ರವನ್ನು ಕಲ್ಪಿಸಿಕೊಟ್ಟಿತು ರಾಮನ್ ಪರಿಣಾಮ ತಿಳಿದುಕೊಳ್ಳಬೇಕಾದರೆ ಬೆಳಕು ಪಾರದರ್ಶಕ ವಸ್ತುವಿನೊಳಗೆ ಪ್ರವೇಶಿಸಿ ಹೊರಗೆ ಬರುವುದನ್ನು ಅಧ್ಯಯನ ಮಾಡಬೇಕಾಗಿದೆ ಬೆಳಕು ಎಂಬ ರೋಹಿತವನ್ನು ನಾವು ಅಧ್ಯಯನ ಮಾಡುತ್ತಿರುವ ವಸ್ತುವಿನ ಮೂಲಕ ಹಾಯಿಸಬೇಕು ಹೀಗೆ ಪ್ರವೇಶಿಸಿದ ಬೆಳಕು ವಸ್ತುವಿನೊಳಗೆ ಇರುವ ಅಣುಗಳಿಂದ ಚದುರಿಸಲ್ಪಟ್ಟು ಹೊರಕ್ಕೆ ಬರುವುದು ಆಗ ಏನಾಗುವುದೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ ಚದುರಿಸಲ್ಪಟ್ಟ ಪ್ರಕಾಶದ ಸ್ಪೆಕ್ಟ್ರಮ್ (ರೋಹಿತ) ಅನ್ನು ಸ್ಪೆಕ್ಟ್ರೋಸ್ಕೋಪ್ ಎಂಬ ಉಪಕರಣದ ಮೂಲಕ ಪರೀಕ್ಷಿಸಬೇಕು ಆಗ ಚದುರಿದ ಪ್ರಕಾಶದ ರೋಹಿತ ಮೊದಲು ಉಪಯೋಗಿಸಿದ ಪ್ರಕಾಶದ ರೋಹಿತ ಒಂದೇ ಆಗಿರದೆ ಮೊದಲಿನ ಬಣ್ಣ ಅಥವಾ ಕಿರಣಗಳ ಜೊತೆಗೆ ಇತರ ಕಿರಣಗಳನ್ನು ಒಳಗೊಂಡಿರುವುದು ಎಂದು ಕಾಣಬಹುದು ವಸ್ತುವಿನ ಕಣಗಳು ಪ್ರವೇಶಿಸಲ್ಪಟ್ಟ ಕಿರಣಗಳನ್ನು ಚದುರಿಸಿ ಅದರ ಸ್ವಲ್ಪ ಭಾಗವನ್ನು ಹೊಸ ಬಣ್ಣ ಅಥವಾ ಕಿರಣಗಳಾಗಿ ಮಾರ್ಪಡಿಸುತ್ತವೆ ಸುಮಾರು ಏಳು ವರ್ಷಗಳು ಬಹಳ ಶ್ರಮವಹಿಸಿ ಅನ್ವೇಷಣೆ ಮಾಡಿದ ಮೇಲೆ ರಾಮನ್ ಅವರಿಗೆ ಈ ಪರಿಣಾಮ ಗೋಚರಿಸಿತು.

1920ನೆಯ ಇಸವಿಯ ಬೇಸಿಗೆಯಲ್ಲಿ ರಾಮನ್ ರವರು ಯುರೋಪ್ ಪ್ರವಾಸಕ್ಕಾಗಿ ಸಮುದ್ರಯಾನ ಮಾಡುತ್ತಿರುವಾಗ ಅವರ ದೃಷ್ಟಿ ಸಮುದ್ರದ ನೀಲಿ ಬಣ್ಣದ ಮೇಲೆ ಬಿದ್ದಿತು, ಅವರು ಭಾರತಕ್ಕೆ ಬಂದಮೇಲೆ ಆ ವಿಷಯವಾಗಿ ಅನೇಕ ಅನುಸಂಧಾನ ಅನ್ವೇಷಣೆಗಳನ್ನು ಮಾಡಿದರೆಂದು ತಿಳಿದು ಬಂದಿದೆ ಇದರಿಂದ ಗಾಳಿ ನೀರು, ಮಂಜುಗಡ್ಡೆ ಮುಂತಾದ ಪಾರದರ್ಶಕ ಕಣಗಳು ಪ್ರಕಾಶವನ್ನು ಚದುರಿಸುವ ವಿಷಯವೂ ಸ್ಪಷ್ಟವಾಯಿತು. ಗಾಳಿಂಉ ಕಣಗಳು ಸೂರ್ಯನ ಪ್ರಕಾಶವನ್ನು ಚದುರಿಸುವುದರಿಂದ ಆಕಾಶವು ನೀಲಿ ಬಣ್ಣ ಹೊಂದಿರುವಂತೆ ಕಾಣುವುದು ಇದನ್ನು ಆಧರಿಸಿದೆ ಈ ನೇರದಲ್ಲಿ ರಾಮನ್ ರು ಪ್ರಯೋಗಗಳನ್ನು ಮಾಡುತ್ತಾ ಮುಂದುವರಿಯುತ್ತಿರಲು 1928ನೆಯ ಇಸವಿಯಲ್ಲಿ ರಾಮನ್ ಪರಿಣಾಮವು ಹೊರ ಬಿದ್ದಿತ್ತು 1929ನೆಯ ವರ್ಷವಿಡಿ ರಾಮನ್ ರು ವಿದೇಶಗಳಲ್ಲಿ ಸಂಚರಿಸಿ ಸಾಬೀತುಪಡಿಸಿದ ಮೇಲೆ 1930ನೆಯ ಡಿಸೆಂಬರ್ 10 ನೆ ತಾರೀಕು ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲು ಯೋಗ್ಯವಾದ ಸುದಿವಸ.ವಿಜ್ಞಾನ ಕ್ಷೇತ್ರದಲ್ಲಿ ಭಾರತಮಾತೆಯ ಅಮರ ಕೀರ್ತಿ ಸ್ತಂಭವನ್ನು ಸ್ಥಾಪಿಸಿದ ದಿನವದು ಮತ್ತು ಭಾರತೀಯರಿಗೆ ವಿಜ್ಞಾನದಲ್ಲಿ ಅಭಿರುಚಿ ಇಲ್ಲವೆಂಬ ಅಪವಾದವನ್ನು ನಿರ್ಮೂಲ ಮಾಡಿ ಗುಪ್ತವಾಗಿದ್ದ ಜ್ಞಾನದ ಅಮರ ಜ್ಯೋತಿಯು ಪ್ರಪಂಚದಲ್ಲಿ ಪ್ರಜ್ವಲಿಸುವಂತೆ ಮಾಡಿದ ರಾಮನ್ ರವರ ಪವಿತ್ರ ದಿನವೇ ಅದು. ರಾಮನ್ ರ ಕೀರ್ತಿ ಶಿಖರ ಗಗನದ ಎತ್ತರಕ್ಕೆ ಬೆಳೆಯಿತು ಎಂಬುದಕ್ಕೆ ನೊಬೆಲ್ ಬಹುಮಾನ ಒಂದೇ ಸಾಕಾಗಿದೆ ಭಾರತ ಸರ್ಕಾರವು ರಾಮನ್ ರವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1928 ರಲ್ಲಿ ಸರ್ ಸಿವಿ ರಾಮನ್ ಅವರು 'ರಾಮನ್ ಪರಿಣಾಮ' ವನ್ನು ಕಂಡುಹಿಡಿದ ಸ್ಮರಣಾರ್ಥವಾಗಿ ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ವಾರ್ಷಿಕವಾಗಿ ಫೆಬ್ರವರಿ 28 ರಂದು ಆಚರಿಸಲಾಗುತ್ತದೆ.

ಚಂದ್ರಶೇಖರ ವೆಂಕಟರಮನ್ ತಮ್ಮ ಹೆಚ್ಚಿನ ಸಂಶೋಧನಾ ಕಾರ್ಯವನ್ನು ಕಲ್ಕತ್ತದಲ್ಲಿ ನಡೆಸಿದರು ನಂತರ 1933ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ( IISc)ಗೆ ಆಗಮಿಸಿ ಅದರ ಭೌತವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದರು ನಂತರವೇ ತಾವೇ ಸ್ಥಾಪಿಸಿದ ರಾಮನ್ ಸಂಶೋಧನಾ ಸಂಸ್ಥೆಯ(RRI)ನ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ತಮ್ಮ ಕೊನೆಯ ದಿನಗಳನ್ನು ತಮ್ಮ ಸಂಶೋಧನಾ ಕೇಂದ್ರದಲ್ಲಿ ಕಳೆದರು ಹೀಗಾಗಿ ರಾಮನ್ ರು ಸೌರಮಂಡಲದಲ್ಲಿನ ಸೂರ್ಯನಂತೆ ಪ್ರಜ್ವಲಿಸಿ ಬೆಳಗುತ್ತಿರುವ, ಎಷ್ಟೋ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾದ ಅಪರೂಪದ ಮಹಾನ್ ವಿಜ್ಞಾನದ ಹಿರಿಮೆ ನಮ್ಮ ರಾಮನ್ ಈ ಯುಗದಲ್ಲಿ ಬೆಳಕು ಎಲ್ಲಿಯವರೆಗೂ ಗೋಚರಿಸುತ್ತದೆಯೋ ಅಲ್ಲಿಯವರೆಗೂ ರಾಮನ್ ಅವರು ಕೂಡಾ ಪ್ರಜ್ವಲಿಸುತ್ತಿರುತ್ತಾರೆ.



**–ಯು.ಕೆ. ಪತ್ತಾರ್**

**ರಾಯಚೂರು ವಿಶ್ವವಿದ್ಯಾಲಯದ ಎಂಎಸ್ಸಿ ಭೌತಶಾಸ್ತ್ರ ವಿದ್ಯಾರ್ಥಿ**

# ಗ್ಯಾರಂಟಿ ಹೊರತುಪಡಿಸಿ ರಾಜ್ಯದ ಅಭಿವೃದ್ಧಿ ಕಾಣುತ್ತಿಲ್ಲ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

**ಚಾಮರಾಜನಗರ, ಫೆ.27:–** ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದರು, ಈಗ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿಯಿಂದ ಬೇರೆ ಅಭಿವೃದ್ಧಿ ಆಗುತ್ತಿಲ್ಲ, ಸರ್ಕಾರಕ್ಕೆ ನಿಲುವಿದ್ದರೇ ಅಭಿವೃದ್ಧಿ ಮಾಡಬಹುದಾಗಿತ್ತು, ಗ್ಯಾರಂಟಿ ಕಾರಣಕ್ಕಾಗಿ ಜನರಿಗೆ ತೆರಿಗೆಯ ಹೊರೆಯೂ ಹೆಚ್ಚಾಗಿದೆ ಎಂದು ಕೇಂದ್ರ ಸಚಿವರ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಅವರು ಗುಂಡ್ಲುಪೇಟೆ ತಾಲೂಕಿನ ಕಡಬೂರಿನಲ್ಲಿ ಶಿವ, ಗಣಪತಿ ದೇಗುಲ ಉದ್ಘಾಟಿಸಿದ ಬಳಿಕ ಗ್ಯಾರಂಟಿಯಿಂದ ಹೊರೆ ಆಗುತ್ತಿದೆ ಎಂಬ ಡಿಕೆಶಿ ಮಾತಿಗೆ ಅವರು ಮಾಧ್ಯಮಕ್ಕೆ ಪ್ರತಿಕ್ರಿಯಿಸಿ, ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದರು, ಈಗ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿಯಿಂದ ಬೇರೆ ಅಭಿವೃದ್ಧಿ ಆಗುತ್ತಿಲ್ಲ, ಸರ್ಕಾರಕ್ಕೆ ನಿಲುವಿದ್ದರೇ ಅಭಿವೃದ್ಧಿ ಮಾಡಬಹುದಾಗಿತ್ತು, ಗ್ಯಾರಂಟಿ ಕಾರಣಕ್ಕಾಗಿ ಜನರಿಗೆ ತೆರಿಗೆಯ ಹೊರೆಯೂ ಹೆಚ್ಚಾಗಿದೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ಎಡವಿದ್ದು ಉದ್ಯೋಗ ಆಕಾಂಕ್ಷಿಗಳು ರಾಜ್ಯ ಸರ್ಕಾರ ವಿರುದ್ಧ ತಿರುಗಿ ಬಿದ್ದಿದ್ದಾರೆ, ಈಗ ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ ಎನ್ನುತ್ತಿದ್ದಾರೆ ಕಾದು ನೋಡಬೇಕು, ಉದ್ಯೋಗ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ, ಕೇಂದ್ರ ಸರ್ಕಾರ ಉದ್ಯೋಗ ಕೊಟ್ರಾ ಎಂದು ಪ್ರಶ್ನಿಸುವುದಲ್ಲ, ಅವರು ಕೊಡಲ್ಲಾ–ನಾನು ಕೊಡಲ್ಲಾ ಎನ್ನುವುದಲ್ಲ, ಎರಡೂವರೆ ವರ್ಷದಿಂದ ಖುರ್ಚಿ ಹಂಚಿಕೆಯಲ್ಲಿ ಸಮಯ ಕಳೆದಿದ್ದು ಈಗಲಾದರೂ ಸರಿಪಡಿಸಿಕೊಳ್ಳಲಿ ಎಂದರು.




40 ಪಸೆರ್ಂಟ್ ಕಮಿಷನ್ ಎಂದು ಅಪಪ್ರಚಾರ ಮಾಡಿ ಅಧಿಕಾರಕ್ಕೆ ಬಂದರು.ಈಗ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಏನು..? ಗುತ್ತಿಗೆದಾರರು ಬದುಕಲು ಸಾಧ್ಯವಾಗುತ್ತಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯ ರಾಜಕಾರಣಕ್ಕೆ ಕುಮಾರಸ್ವಾಮಿ ಎಂಟ್ರಿ ವಿಚಾರಕ್ಕೆ ಮಾತನಾಡಿ, ರಾಜ್ಯದಲ್ಲಿರುವ ಈ ಕೆಟ್ಟ ಸರ್ಕಾರ ಕಿತ್ತೆಸೆದು ಒಳ್ಳೆಯ ಸರ್ಕಾರ ನೀಡಲು , ಚುನಾವಣೆಯಲ್ಲಿ ನನ್ನ ಪಾತ್ರವನ್ನು ನಾನು ನಿರ್ವಹಿಸುತ್ತೇನೆ ಎಂದರು.

ಇದೇ ವೇಳೆ, ಸ್ಥಳೀಯ ಚುನಾವಣೆಯಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿ ಇರಲಿದೆಯೇ ಎಂಬುದಕ್ಕೆ ಮಾತನಾಡಿ, ಜೊತೆ ಇರುವ ಉದ್ದೇಶದಿಂದಲೇ ಮೈತ್ರಿ ಮಾಡಿಕೊಂಡಿದ್ದೇವೆ, ಜೊತೆಗೆ ಇದ್ದೇವೆ, ಮುಂದಿನ ಚುನಾವಣೆಯಲ್ಲಿ ನಮ್ಮ ಮೈತ್ರಿ ಸರ್ಕಾರಕ್ಕೆ ಜನರ ಬೆಂಬಲ ನೀಡಲಿದ್ದಾರೆ ಎಂದರು.

ನಿಖಿಲ್ ರಾಮನಗರದಿಂದ ಸ್ಪರ್ಧೆ ಬಗ್ಗೆ ಮಾತನಾಡಿ, ಕಳೆದ ಚುನಾವಣೆಯಲ್ಲಿ ಜನರು ತಪ್ಪು ನಿರ್ಧಾರ ಈಗ ಮನವರಿಕೆಯಾಗಿದೆ, ಉಾಂುರ್ಾರ ನಡವಳಿಕೆ ಏನು ಎಂಬುದು ಮನವರಿಕೆಯಾಗಿದೆ,ರಾಮನಗರ ಜಿಲ್ಲೆಯನ್ನು ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಿಗೂ ಸೂಕ್ತ ಅಭ್ಯರ್ಥಿಗೆ ಕೊರತೆಯಿಲ್ಲ, ಮುಂದಿನ ಚುನಾವಣೆಗೆ ಮೈತ್ರಿ ಸರ್ಕಾರಕ್ಕೆ ಜನರ ಬೆಂಬಲ ಇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಗತಿ ಹಾದಿಯಲ್ಲಿ ಸಂಸ್ಕೃತಿ ಮರೆಯಾಗದಿರಲಿ: ಪ್ರಗತಿ ಹೊಂದುತ್ತಿರುವಂತೆ ಸಂಸ್ಕೃತಿ ಮರೆಯಾಗುತ್ತಿದೆ, ಇದಾಗಬಾರದು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಕೆಲ ದಿನಗಳಿಂದ ಸುದ್ದಿಗಳನ್ನು ನೋಡುತ್ತಿದ್ದರೇ ಮನಸಿಗೆ ಬಹಳ ನೋವುಂಟಾಗಲಿದೆ, ತಂದೆ–ತಾಯಿಯ ಸಾವು, ಮಕ್ಕಳೇ ಪಾಲಕರನ್ನು ಕೊಲೆ ಮಾಡುವುದು ಈ ರೀತಿ ಘಟನೆಗಳನ್ನು ಕಾಣುತ್ತಿದ್ದು ನಾವು ಪ್ರಗತಿ ಹೊಂದುತ್ತಿದ್ದೇವೆ. ಆದರೆ, ಸಂಸ್ಕೃತಿ ಮರೆಯುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಹಿಂದಿನ ಕಾಲದಲ್ಲಿ ಸಮಸ್ಯೆಗಳಿದ್ದಾಗಲೂ, ನೀರು– ರಸ್ತೆ–ವಿದ್ಯುತ್ ಸೌಕರ್ಯ ಇಲ್ಲದಿದ್ದಾಗಲೂ ನೆಮ್ಮದಿಯಿಂದ ಬಾಳ್ವೆ ಮಾಡುತ್ತಿದ್ದರು. ಆದರೆ, ಇಂದು ಎಲ್ಲವೂ ಇದೆ ಆದರೆ ಸಂಸ್ಕೃತಿ ಕಾಣೆಯಾಗಿದೆ. ಹಾಗಾಗದಿರಲಿ ಪ್ರಗತಿ ಜೊತೆ ಸಂಸ್ಕೃತಿಯನ್ನು ಉಳಿಸಿಕೊಳ್ಳೋಣ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್. ಬಾಲರಾಜ್, ಗುಂಡ್ಲುಪೇಟೆ ಜೆಡಿಎಸ್ ಮುಖಂಡ ಕಡಬೂರು ಮಂಜುನಾಥ್ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಹಾಜರಿದ್ದರು.

ಮೊದಲನೇ ಪುಟದಿಂದ

# ಜಿಲ್ಲೆಯಲ್ಲಿ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ: ತ್ರೀವ ಕಣ್ಗಾವಲು

ಬ್ರಿಲಿಯಂಟ್, ಕ್ರಿಷ್ಣದೇವರಾಯ, ಎಕ್ಸಲೆಂಟ್ ಹಾಗೂ ವಿಸ್ಡಮ್ ಪ.ಪೂ.ಕಾಲೇಜ್ ನಲ್ಲಿ ನಡೆಯಲಿವೆ. ಮಾನವಿಯಲ್ಲಿ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜ್, ಎಸ್.ಪಿ.ವಿ, ಎಸ್.ಆರ್.ಎಸ್.ವಿ, ಲೋಯೋಲಾ ಪದವಿ ಪೂರ್ವ ಕಾಲೇಜಿನ ನಡೆಯಲಿವೆ. ಮಸ್ಕಿನಲ್ಲಿ ಬಾಲಕರ ಹಾಗೂ ಬಾಲಕಿರ ಸ.ಪ.ಪೂ ಕಾಲೇಜ್‌ನಲ್ಲಿ ನಡೆಯಲಿವೆ. ಸಿರವಾರದಲ್ಲಿ ಸರ್ಕಾರಿ ಪ.ಪೂ.ಕಾಲೇಜ್ ಹಾಗೂ ಅಮರೇಗೌಡ ಪಾಟೀಲ್ ಬಯ್ಯಾಪೂರ್ ಪ.ಪೂ ಕಾಲೇಜಿನಲ್ಲಿ ನಡೆಯಲಿವೆ.

ವೇಳಾಪಟ್ಟಿ: ಫೆಬ್ರವರಿ 28ರ ಶನವಾರ ದಂದು ಕನ್ನಡ, ಅರೇಬಿಕ್, ಮಾರ್ಚ್ 2ರ ಸೋಮವಾರ ದಂದು ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ, ಮಾರ್ಚ್ 3ರ ಮಂಗಳವಾರ ದಂದು ಇಂಗ್ಲಿಷ್, ಮಾರ್ಚ್ 4ರ ಬುಧವಾರ ದಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ ಫ್ರೆಂಚ್, ಮಾರ್ಚ್ 5ರ ಗುರುವಾರ ದಂದು ಇತಿಹಾಸ, ಮಾರ್ಚ್ 6ರ ಶುಕ್ರವಾರ ದಂದು ಭೌತಶಾಸ್ತ್ರ, ಮಾರ್ಚ್ 7ರ ಶನವಾರ ದಂದು ಐಚ್ಚಿಕ ಕನ್ನಡ, ವ್ಯವಹಾರ ಅಧ್ಯಯನ, ಭೂಗರ್ಭ ಶಾಸ್ತ್ರ, ಮಾರ್ಚ್ 9ರ ಸೋಮವಾರ ದಂದು ರಸಾಯನಶಾಸ್ತ್ರ, ಶಿಕ್ಷಣಶಾಸ್ತ್ರ, ಮೂಲ ಗಣಿತ, ಮಾರ್ಚ್ 10ರ ಮಂಗಳವಾರ ದಂದು ಅರ್ಥಶಾಸ್ತ್ರ, ಮಾರ್ಚ್ 11ರ ಬುಧವಾರ ದಂದು ತರ್ಕಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗೃಹ ವಿಜ್ಞಾನ, ಮಾರ್ಚ್ 12ರ ಗುರುವಾರ ದಂದು ಹಿಂದಿ, ಮಾರ್ಚ್ 13ರ ಶುಕ್ರವಾರ ರಾಜ್ಯಶಾಸ್ತ್ರ, ಮಾರ್ಚ್ 14ರ ಶನವಾರ ದಂದು ಲೆಕ್ಕಶಾಸ್ತ್ರ, ಗಣಿತ, ಮಾರ್ಚ್ 16ರ ಸೋಮವಾರ ದಂದು ಸಮಾಜಶಾಸ್ತ್ರ, ಜೀವಶಾಸ್ತ್ರ, ಗಣಕ ವಿಜ್ಞಾನ, ಮಾರ್ಚ್ 17ರ ಮಂಗಳವಾರ ದಂದು ಹಿಂದುಸ್ತಾನ ಸಂಗೀತ, ಎಲೆಕ್ಟ್ರಾನಿಕ್ಸ್ ಮತ್ತು ಯಂತ್ರಾಂಶ ಉಡುಪುಗಳ ತಯಾರಿಕೆ ಮತ್ತು ಗೃಹೋಪಯೋಗಿ ವಸ್ತುಗಳು, ಮಾಹಿತಿ ತಂತ್ರಜ್ಞಾನ, ರೀಟೇಲ್ ಆಟೋಮೊಬೈಲ್, ಆರೋಗ್ಯ ರಕ್ಷಣೆ, ಬ್ಯೂಟಿ ಅಂಡ್ ವೆಲ್‌ನೆಸ್ ವಿಷಯಗಳು ನಡೆಯಲಿವೆ.

ಉಚಿತ ಪ್ರಯಾಣ ವ್ಯವಸ್ಥೆ: ವಿದ್ಯಾರ್ಥಿಗಳು ತಮ್ಮ ನವಾಸದಿಂದ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಮತ್ತು ಮರಳಿ ಮನೆಗೆ ಬರಲು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಕಾಲೇಜಿನ ಗುರುತಿನ ಚೀಟಿ ಮತ್ತು ಪ್ರವೇಶಪತ್ರವನ್ನು ತೋರಿಸಿ ಪ್ರಯಾಣಿಸಬಹುದಾಗಿದೆ.

1) ಆತ್ಮವಿಶ್ವಾಸವೇ ಯಶಸ್ಸಿನ ಗುಟ್ಟು, ವಿದ್ಯಾರ್ಥಿಗಳು ಇಡೀ ವರ್ಷ ಓದಿರುತ್ತಾರೆ. ಆ ಪರಿಶ್ರಮವನ್ನು ನೆನಪಿಸಿಕೊಂಡು ನನಗೆ ಬರುತ್ತದೆ, ನಾನು ಬರೆಯಬಹುದು ಎಂಬ ಧೈರ್ಯವನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿ ಇಟ್ಟುಕೊಂಡು, ಸಕಾರಾತ್ಮಕ ಚಿಂತನೆಯ ಮೂಲಕ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಈಶ್ವರ ಕುಮಾರ್ ಕಾಂದೂ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಯಚೂರು.

2) ಗಾಬರಿ ಹಾಗೂ ಆತಂಕಕ್ಕೆ ಒಳಗಾಗದೆ, ವಿದ್ಯಾರ್ಥಿಗಳು ನಿಶ್ಚಿಂತೆಯಿಂದ ಪರೀಕ್ಷೆ ಎದುರಿಸಿ, ಮೊದಲ 15 ನಿಮಿಳಗಳ ಕಾಲ ಪ್ರಶ್ನೆ ಪತ್ರಿಕೆಯನ್ನು ಸಂಪೂರ್ಣವಾಗಿ ಓದಿಕೊಳ್ಳಿ, ಯಾವುದೇ ವದಂತಿಗೆ ಕಿವಿಕೊಡದೆ ಪರೀಕ್ಷೆಯನ್ನು ಎದುರಿಸಬೇಕೆಂದು. ಸೋಮಶೇಖರಪ್ಪ ಹೋಕ್ರಾಣಿ,
ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಯಚೂರು.

# ತ.ನಾಡಿನಲ್ಲಿ ಪಕ್ಷಾಂತರ ಪರ್ವ: ಮಾಜಿ ಸಿಎಂ ಪನ್ನಿರ್ ಸೆಲ್ವಂ ಡಿಎಂಕೆಗೆ ಸೇರ್ಪಡೆ

**ಚೆನ್ನೈ, ಫೆ.27–** ತಮಿಳುನಾಡು ಮಾಜಿ ಮುಖ್ಯಮಂತ್ರಿ ಹಾಗೂ ಉಚ್ಚಾಟಿತ ಎಐಎಡಿಎಂಕೆ ನಾಯಕ ಓ ಪನ್ನೀರ್ ಸೆಲ್ವಂ ಅವರು ದೀರ್ಘ ಕಾಲದ ಎಐಎಡಿಎಂಕೆ ನಂಟು ಕಡಿತ ಮಾಡಿಕೊಂಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ನೇತೃತ್ವದ ಡಿಎಂಕೆ ಪಕ್ಷಕ್ಕೆ ಇಂದು ಸೇರ್ಪಡೆಯಾಗಿದ್ದು ಹೊಸ ರಾಜಕೀಯ ಮನ್ವಂತರಕ್ಕೆ ವೇದಿಕೆ ಸಜ್ಜಾಗಿದೆ.

ತಮಿಳುನಾಡು ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ಚುನಾವಣೆಯ ನಡೆಯಲಿರುವ ಹಿನ್ನೆಲೆಯಲ್ಲಿ ಓ ಪನ್ನೀರ ಸೆಲ್ವಂ ಅವರ ಡಿಎಂಕೆ ಪಕ್ಷ ಸೇರ್ಪಡೆ ಮಹತ್ವ ಪಡೆದುಕೊಂಡಿದೆ. ಈ ಮೂಲಕ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ವಿರುದ್ಧ ವಿಧಾನಸಭೆ ಚುನಾವಣೆಯಲ್ಲಿ ತಿರುಗಿ ಬೀಳಲು ಅಖಾಡ ಸಜ್ಜಾಗಿದೆ.

ಮಾಜಿ ಮುಖ್ಯಮಂತ್ರಿ ಓ ಪನ್ನಿರ್ ಸೆಲ್ವಂ ಅವರು ಬೆಂಬಲಿಗರೊಂದಿಗೆ ಹಲವು ಸುತ್ತಿನ ಸಮಾಲೋಚನೆಗಳನ್ನು ನಡೆಸಿದ ಆಡಳಿತಾರೂಢ ಡಿಎಂಕೆಗೆ ಸೇರಿದ್ದಾರೆ.ಚೆನ್ನೈನಲ್ಲಿರುವ ಡಿಎಂಕೆ ಪ್ರಧಾನ ಕಚೇರಿಯಲ್ಲಿ ಅವರನ್ನು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರ ಪಕ್ಷಕ್ಕೆ ಔಪಚಾರಿಕವಾಗಿ ಬರಮಾಡಿಕೊಂಡರು. ಎಐಎಡಿಎಂಕೆ ಜೊತೆಗಿನ ಭಿನ್ನಾಭಿಪ್ರಾಯದಿಂದಾಗಿ ಓ ಪನ್ನಿರ್ ಸೆಲ್ವಂ ಡಿಎಂಕೆ ಸೇರಿದ್ದು ಈ ನಡೆ ರಾಜಕೀಯ ರಾಜಕೀಯ ಧೃವೀಕರಣಕ್ಕೆ ಕಾರಣವಾಗಲಿದೆ ಎನ್ನಲಾಗಿದೆ.

ತಮಿಳುನಾಡಿನ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ಮತ್ತು ಮಾಜಿ ಎಐಎಡಿಎಂಕೆ ಮುಖ್ಯಸ್ಥೆ ಜೆ. ಜಯಲಲಿತಾ ಅವರ ದೀರ್ಘಕಾಲೀನ ನಿಷ್ಠಾವಂತರಾಗಿದ್ದ ಓ ಪನ್ನೀರ ಸೆಲ್ವಂ ಅವರು 2016 ರಲ್ಲಿ ಅವರ ಮರಣದ ನಂತರ ಪಕ್ಷದೊಳಗೆ ತೀವ್ರವಾದ ಅಧಿಕಾರ ಹೋರಾಟಕ್ಕೆ ಸಿಲುಕಿದ್ದರು.

ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರೊಂದಿಗಿನ ಅವರ ಪೈಪೋಟಿ ಎಐಎಡಿಎಂಕೆಯಲ್ಲಿ ವಿಭಜನೆಗೆ ಕಾರಣವಾಯಿತು, ಅಂತಿಮವಾಗಿ ಓ ಪನ್ನೀರ ಸೆಲ್ವಂ ಅವರು ಸಾಂಸ್ಥಿಕ ನಿಯಂತ್ರಣ ಮತ್ತು ರಾಜಕೀಯ ನೆಲಂ ಕಳೆದುಕೊಂಡಿದ್ದರು ಇದೀಗ ವಿಧಾನಸಭೆ ಚುನಾವಣೆಗೂ ಮುನ್ನ ಡಿಎಂಕೆಗೆ ಸೇರಿದ್ದಾರೆ.

ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಪರಂಪರೆಯ ನಿಜವಾದ ಉತ್ತರಾಧಿಕಾರಿ ಎಂದು ತಮ್ಮನ್ನು ತಾವು ಸ್ಥಾಪಿಸಿಕೊಂಡರು ಅವರ ಬಣವು ಗಮನಾರ್ಹ ರಾಜಕೀಯ ಸಂಘರ್ಷದಿಂದ ಹೊರ ಬರಲು ಸಾಧ್ಯವಾಗಲಿಲ್ಲ.

ಇತ್ತೀಚೆಗೆ, ಓ ಪನ್ನೀರ ಸೆಲ್ವಂ 2026 ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಪಕ್ಷದೊಂದಿಗೆ ಮತ್ತೆ ಒಂದಾಗಲು ಇಚ್ಛೆ ವ್ಯಕ್ತಪಡಿಸಿದ್ದರು.ಡಿಎಂಕೆಗೆ ಸೇರ್ಪಡೆಗೊಳ್ಳುವ ಮುನ್ನ, ಪನ್ನೀರ್ ಸೆಲ್ವಂ ತಮ್ಮ ಸಾರ್ವಜನಿಕ ಹೇಳಿಕೆಗಳ ಮೂಲಕ ನಿಷ್ಠೆಯಲ್ಲಿ ಬದಲಾವಣೆಯ ಬಗ್ಗೆ ಬಲವಾದ ಸುಳಿವು ನೀಡಿದ್ದರು. ಇತ್ತೀಚೆಗೆ, ಡಿಎಂಕೆ 2026 ರ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಉಳಿಸಿಕೊಳ್ಳಲು ಮತ್ತು ಸತತ ಎರಡನೇ ಅವಧಿಗೆ ಸರ್ಕಾರ ರಚಿಸುವ ಬಲವಾದ ಅವಕಾಶ ಹೊಂದಿದೆ ಎಂದು ಹೇಳಿದ್ದಾರೆ.

ಸ್ಟಾಲಿನ್ ನಾಯಕತ್ವ ಒಪ್ಪಿ ಸೇರ್ಪಡೆ

ಡಿಎಂಕೆ ನಾಯಕ ಹಾಗೂ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರ ನಾಯಕತ್ವವನ್ನು ಒಪ್ಪಿ ಡಿಎಂಕೆ ಗೆ ಸೇರ್ಪಡೆ ಆಗಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಪನ್ನೀರ್ ಸೆಲ್ವಂ ಹೇಳಿದ್ದಾರೆ.ದ್ರಾವಿಡ ಚಳವಳಿ ಉಳಿಸಲು, ದ್ರಾವಿಡರ ನೀತಿ ಉಳಿಸಲು, ಡಿಎಂಕೆ ಕೆಲಸ ಮಾಡುತ್ತಿದೆ" ಹೀಗಾಗಿ ಡಿಎಂಕೆ ಸೇರಿದ್ದೇನೆ ಎಂದಿದ್ದಾರೆ

ಪಕ್ಷದ ಪ್ರಧಾನ ಕಚೇರಿ ಅಣ್ಣಾ ಅರಿವಲಯಂನಲ್ಲಿ ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಸಮ್ಮುಖದಲ್ಲಿ ಸೇರ್ಪಡೆ ಬಳಿಕ ಮಾತನಾಡಿದ ಅವರು ಸ್ಟಾಲಿನ್ ಜನರಿಗೆ ಉತ್ತಮ ಆಡಳಿತ ನೀಡುತ್ತಿದ್ದಾರೆ ಮತ್ತು ಜನರು ಅದನ್ನು ಗಮನಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.ಡಿಎಂಕೆಗೆ ಕಾರ್ಯಕರ್ತರಾಗಿ ಸೇರಿದ್ದೇನೆ. ನಾನು ಪಕ್ಷದ ಕಾರ್ಯಕರ್ತರಲ್ಲಿ ಒಬ್ಬನಾಗಿ ಪಕ್ಷದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇನೆ ಎಂದಿದ್ದಾರೆ



ದಕ್ಷಿಣದ ಯಾವುದೇ ನಾಯಕರು ಬಲಿಷ್ಠರಾಗದಂತೆ ನೋಡಿಕೊಳ್ಳುವುದು ಎಡಪ್ಪಾಡಿ ಪಳನಿಸ್ವಾಮಿ ಉದ್ದೇಶವಾಗಿದೆ ಆರೋಪಿಸಿದ್ದಾರೆ.ಸಚಿವ ಪಿ ಕೆ ಶೇಖರಬಾಬು ಅವರು ಪನ್ನೀರ್‌ಸೆಲ್ವಂ ಅವರೊಂದಿಗೆ ಅದೇ ಕಾರಿನಲ್ಲಿ ಕಾಣಿಸಿಕೊಂಡಿದ್ದು ಪಕ್ಷದ ಸಂಘಟಿತ ನಡೆಯ ಸೂಚಕವಾಗಿದೆ

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ ಪಳನಿಸ್ವಾಮಿ ಅವರು ಎಐಎಡಿಎಂಕೆ ಉಚ್ಚಾಟಿತ ನಾಯಕರಾದ ಎಐಎಡಿಎಂಕೆ ಮುಖ್ಯಸ್ಥ ಟಿಟಿವಿ ದಿನಕರನ್ ಅವರನ್ನು ಎನ್‌ಡಿಎಗೆ ಸ್ವಾಗತಿಸಿದ ನಂತರ ಡಿಎಂಕೆಗೆ ವಿರೋಧ ವ್ಯಕ್ತಪಡಿಸುತ್ತಿದ್ದ ಓಪಿಎಸ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಸರ್ಕಾರಿ ಶಾಲೆಗಳ ಉಳಿಸುವಂತೆ ಆಗ್ರಹಿಸಿ ಪ್ರತಿಭಟನಾ ಸಮಾವೇಶ




**ಬಳ್ಳಾರಿ, ಫೆ.27:** ಎಐಡಿಎಸ್ ಸಂಘಟನೆ ವತಿಯಿಂದ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಲು ಜಿಲ್ಲಾ ಮಟ್ಟದ ಪ್ರತಿಭಟನಾ ಸಮಾವೇಶವನ್ನು ಇಂದು ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಯಿತು. 'ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆಗೆ ಧಿಕ್ಕಾರ', 'ಸಾರ್ವಜನಿಕ ಶಿಕ್ಷಣ ಉಳಿಸಿ ', 'ನಮ್ಮೂರ ಶಾಲೆ ನಮ್ಮ ಹಕ್ಕು' ಎಂಬ ವಿದ್ಯಾರ್ಥಿ–ಯುವಜನ– ಪೋಷಕರ ಘೋಷಣೆಗಳು ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಲು ಅವರು ತೊಟ್ಟ ಪ್ರತಿಜ್ಞೆಯ ಪ್ರತೀಕವಾಗಿದ್ದವು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷರಾದ ಅಲ್ಲಮಪ್ರಭು ಬೆಟ್ಟದೂರು ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ "

ಕೆಪಿಎಸ್ ಮ್ಯಾಗ್ನೆಟ್ ಎನ್ನುವಂತಹ ಶಾಲೆಗಳನ್ನು ಸರ್ಕಾರ ಸಾಲ ಮಾಡಿ ತೆರೆಯುತ್ತಿರುವುದು ಒಂದು ಕೆಟ್ಟ ಯೋಜನೆ. ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳನ್ನು ಮುಚ್ಚಿ ಮಕ್ಕಳನ್ನು ಸಂಪೂರ್ಣವಾಗಿ ಶಿಕ್ಷಣದಿಂದ ಆಚೆ ತಳ್ಳುವ ಹುನ್ನಾರ ಇದರಲ್ಲಿದೆ. ನಾವು ಕಟ್ಟುವ ತೆರಿಗೆಯಿಂದ ನಮ್ಮ ಊರಿನ ಸರ್ಕಾರಿ ಶಾಲೆಗಳನ್ನು ಬಲ ಪಡಿಸುವ ಬದಲಿಗೆ ಮುಚ್ಚುತ್ತಿರುವ ಸರ್ಕಾರದ ನೀತಿಯ ವಿರುದ್ಧ ಜನತೆ ಒಂದಾಗಿ ಹೋರಾಟಕ್ಕೆ ಇಳಿಯಬೇಕಾಗಿದೆ. ಇದು ಇಂದಿನ ಘಳಿಗೆಯ ಅವಶ್ಯಕತೆ " ಎಂದು ಕರೆ ಕೊಟ್ಟರು.

ಎಐಡಿಎಸ್ ರಾಜ್ಯ ಉಪಾಧ್ಯಕ್ಷರಾದ ಅಭಯ ದಿವಾಕರ್ ಮಾತನಾಡುತ್ತಾ " ಇಲ್ಲಿಯವರೆಗೂ ಅಧಿಕಾರಕ್ಕೆ ಬಂದಿರುವ ಯಾವ ರಾಜಕೀಯ ಪಕ್ಷಗಳು ಕೂಡ ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸುವ ಪ್ರಯತ್ನ ಮಾಡಿಲ್ಲ. ಬದಲಿಗೆ ಹಂತ ಹಂತವಾಗಿ ಪೆಟ್ಟು ಕೊಡುತ್ತಾ ಬಂದಿವೆ. ಈಗ ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಮೂಲಕ ಸಾರ್ವಜನಿಕ ಶಿಕ್ಷಣಕ್ಕೆ ಸಂಪೂರ್ಣ ತಿಲಾಂಜಲಿ ಇಡಲು ಹೊರಟಿದೆ. ಇದರಿಂದಾಗಿ ಸಮಾಜದ ಅತ್ಯಂತ ಕೆಳ ವರ್ಗದ ಮಕ್ಕಳು, ದಲಿತರು, ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಬೇಕೆಂದು ಹೋರಾಡಿದ ಮಹನೀಯರ ಕನಸುಗಳು ಮೂಲೆಗುಂಪಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ನಾಡಿನ ವಿದ್ಯಾರ್ಥಿ–ಯುವಜನರು , ಪ್ರಜ್ಞಾವಂತ ಜನತೆ ಒಗ್ಗಟ್ಟಾಗಿ ಸರ್ಕಾರದ ಈ ಜನ ವಿರೋಧಿ ನೀತಿಯ ವಿರುದ್ಧ ಬಲಿಷ್ಠ ಪ್ರಜಾತಾಂತ್ರಿಕ ಚಳುವಳಿಗೆ ಮುನ್ನುಡಿ ಬರೆಯಬೇಕಿದೆ" ಎಂದರು.

ಶಿಕ್ಷಣ ಬೆಳೆಸಿ ಸಮಿತಿಯ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಮತಿ ನಾಗರತ್ನ ಎಸ್. ಜಿ. ಮಾತನಾಡಿ "ಶಿಕ್ಷಣ ಹುಟ್ಟುವ ಪ್ರತಿ ಮಗುವಿನ ಮೂಲಭೂತ ಹಕ್ಕು. ಆದರೆ ಇಂದಿನ ಸರ್ಕಾರಗಳು ಸರ್ಕಾರಿ ಶಾಲೆಗಳನ್ನು ಮುಚ್ಚುವುದರ ಮೂಲಕ ಆ ಮೂಲಭೂತ ಹಕ್ಕನ್ನೇ ಕಸಿದುಕೊಳ್ಳಲು ಹೊರಟಿವೆ. ಇದು ಜೀವಿಸುವ ಹಕ್ಕನ್ನೇ ಕಸಿದುಕೊಂಡಂತೆ. ಜನತೆ ಇದನ್ನು ಎಂದಿಗೂ ಸಹಿಸಬಾರದು" ಎಂದು ಹೇಳಿದರು.

ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿಗಳಾದ ಡಾ. ಎನ್. ಪ್ರಮೋದ್, ಎಐಎಂಎಸ್ ನ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಮತಿ ವಿಜಯಲಕ್ಷ್ಮಿ, ಎಐಕೆಕೆಎಂಎಸ್ ನ ಜಿಲ್ಲಾ ಕಾರ್ಯದರ್ಶಿಗಳಾದ ಗುರಳ್ಳಿ ರಾಜ, ಎಐಡಿವೈಓ ನ ಜಿಲ್ಲಾ ಕಾರ್ಯದರ್ಶಿಗಳಾದ ಜಗದೀಶ್ ನೇಮಕಲ್ ಮಾತನಾಡಿದರು.

ಎಐಡಿಎಸ್ ನ ಜಿಲ್ಲಾ ಕಾರ್ಯದರ್ಶಿಗಳಾದ ಕಂಬಳಿ ಮಂಜುನಾಥ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಪ್ರತಿಭಟನಾ ಸಮಾವೇಶದಲ್ಲಿ ಹಲವಾರು ಹಳ್ಳಿ, ಬಡಾವಣೆ, ಕಾಲೇಜಿನ ವಿದ್ಯಾರ್ಥಿಗಳು, ಯುವಜನರು, ಪೋಷಕರು, ಮಹಿಳೆಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮುಂದಿನ ದಿನಗಳಲ್ಲಿ ಬಲಿಷ್ಠ ಹೋರಾಟಗಳನ್ನು ಕಟ್ಟುವ ನಿಟ್ಟಿನಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಿ ಜಿಲ್ಲಾ ಸಮಿತಿಯನ್ನು ರಚನೆ ಮಾಡಲಾಯಿತು.

# ಪಿಪ್ಯೂಲ್ ಟ್ರೀ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಗಾಂಜಾ ಸೇವನೆ ಆರೋಪ

**ಬಳ್ಳಾರಿ, ಫೆ.27:** ತಾಲೂಕಿನ ಶ್ರೀಧರಗಡ್ಡೆ ಗ್ರಾಮದ ಬಳಿ ಇರುವ ಪಿಪ್ಯೂಲ್ ಟ್ರೀ ಶಾಲೆ ಮತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಗಾಂಜಾ ಮಾರಾಟ ಮಾಡಲಾಗುತ್ತಿದೆಂದು ಆರೋಪಿಸಿ ಇಂದು ಎಬಿವಿಪಿ ವಿದ್ಯಾರ್ಥಿಗಳ ಸಂಘಟನೆಯಿಂದ ಪ್ರತಿಭಟನೆ ಮಾಡಿ, ಶಾಲೆ ಕಾಲೇಜಿನ ಹೂ ಕುಂಡ , ಕಿಟಕಿ ಗ್ಲಾಸ್ ಒಡೆದು ಹಾಕಲಾಗಿದ್ದು. ಪೊಲೀಸರು ಪ್ರತಿಭಟನೆ ನಡೆಸಿದ 20 ಕ್ಕೂ ಹೆಚ್ಚು ಎಬಿವಿಪಿಯ ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದಾರೆ.

ಈ ಶಾಲೆ ಕಾಲೇಜಿನಲ್ಲಿ ಬಾಲಕಿಯರ ಯೂನಿಫಾರಂ ಸರಿಯಿಲ್ಲ. ಮೊಣಕಾಲಿನ ಕೆಳಗಿನ ವರೆಗೆ ಇರುವಂತೆ ಮಾಡಿ. ಇಲ್ಲದಿದ್ದರೆ ಮಕ್ಕಳಲ್ಲಿ ಲೈಂಗಿಕ ಆಸಕ್ತಿ ಕೆರಳಿಸುವಂತೆ ಇದೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಎಬಿವಿಪಿಯಿಂದ ಹಲವು ಬಾರಿ ಮನವಿ ಮಾಡಿದರೂ, ಶಾಲಾ ಮುಖ್ಯಸ್ಥರು ಸ್ಪಂದಿಸಿರಲಿಲ್ಲವಂತೆ.

ಕಳೆದ ಕೆಲ ತಿಂಗಳ ಹಿಂದೆ ಈ ಶಾಲೆಯ ವಿದ್ಯಾರ್ಥಿನಿಯನ್ನು ಶಾಲೆಯ ಮಕ್ಕಳೆ ಗಾಂಜಾ ಸೇವಿಸಿ ಅತ್ಯಾಚಾರ ಮಾಡಿ ಹತ್ಯೆ ಮಾಡಿದ್ದರ ಬಗ್ಗೆಯೂ ಬಿಜೆಪಿ ಆರೋಪ ಮಾಡಿತ್ತು.

ಶಾಲಾ ಕಾಲೇಜಿನ ಆವರಣದಲ್ಲಿಯೇ ವಿದ್ಯಾರ್ಥಿನಿಯರು ಗಾಂಜಾ ಸೇದುವುದನ್ನು ಹೊರಗಡೆಯಿಂದ ಯಾರೋ ವೀಡಿಯೂ ತೆಗೆದು ಹರಿ ಬಿಟ್ಟಿದ್ದಾರೆ.

ಒಟ್ಟಾರೆ ಈ ಶಾಲೆ ಕಾಲೇಜಿನಲ್ಲಿ ಗಾಂಜಾ ವಹಿವಾಟು ಅದರಲ್ಲೂ ಹಾಸ್ಟಲ್ ವಿದ್ಯಾರ್ಥಿಗಳಲ್ಲಿ ಇದು ಹೆಚ್ಚಾಗಿದೆಯಂತೆ.

ಅದಕ್ಕಾಗಿ ಇದನ್ನು ನಿಯಂತ್ರಿಸಬೇಕು ಎಂದು ಇಂದು ನಾಗರಾಜ್ ನೇತೃತ್ವದಲ್ಲಿ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಈ ವೇಳೆ ಕಾಲೇಜಿನ ಸಿಬ್ಬಂದಿಯ ವರ್ತನೆಯಿಂದ ಬೇಸತ್ತ ಕಾರ್ಯಕರ್ತರು ಆಕ್ರೋಶ ದಿಂದ ಹೂ ಕುಂಡ, ಪೀಠೋಪಕರಣ, ಕಿಟಕಿ ಗ್ಲಾಸ್ ಗಳನ್ನು ಒಡೆದು ಹಾಕಿದರು. ಸ್ಥಳಕ್ಕೆ ಪೊಲೀಸರು ಬಂದಾಗ ಅವರ ನಡುವೆಯೂ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿ ಕೈ ಮೀರಬಾರದೆಂದು ಗ್ರಾಮೀಣ ಠಾಣೆಯ ಸಿಪಿಐ ಉದಯರವಿ ಮತ್ತವರ ಸಿಬ್ಬಂದಿ ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಿತು. ಪೊಲೀಸರ ಜೀಪ್



ಹತ್ತುವ ವೇಳೆಯೂ ಎಬಿಪಿಪಿ ಕಾರ್ಯಕರ್ತರು ಪ್ರತಿಭಟನೆ ವೇಳೆ ಪೊಲೀಸರು ಲಾಠಿಚಾರ್ಜ್ ಮಾಡಿದ್ದಾರೆಂದು ಆರೋಪಿಸಿ ಹೈಡ್ರಾಮ ಮಾಡಿದರು.

ಕಾನೂನು ರೀತಿ ಕ್ರಮ

ಎಸ್ಪಿ ಹೇಳಿಕೆ:: ಎಬಿವಿಪಿ ವಿದ್ಯಾರ್ಥಿಗಳಿಂದ ಗಲಾಟೆ ನಡೆದ ವಿಚಾರದ ಬಗ್ಗೆ ಪೀಪ್ಯಲ್ ಟ್ರೀ ಶಾಲೆಗೆ ಎಸ್ಪಿ ಸುಮನ್ ಪನ್ನೇಕರ್ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ.

ಪ್ರತಿಭಟನೆ ವೇಳೆ ಪೊಲೀಸರನ್ನು ನೂಕಿ ಕಾಲೇಜು ಆವರಣದೊಳಗೆ ನುಗ್ಗಿ ಬಂದಿದ್ದಾರೆ. ಗಲಾಟೆ ಮಾಡುವ ಉದ್ದೇಶದಿಂದ ಬಂದಂತಿದೆ. ಗಲಾಟೆ ಹಿಂದೆ ದುರುದ್ದೇಶವಿದೆಯೇ ಎನ್ನುವ ಬಗ್ಗೆ ತನಿಖೆ ಮಾಡ್ತೇವೆ..

ಗಾಂಜಾ ಮಾರಾಟದ ಬಗ್ಗೆ ಮಾಹಿತಿ ಇದ್ರೇ ಪೊಲೀಸರಿಗೆ ತಿಳಿಸಬೇಕು.ಗಾಂಜಾ ಸೇದುವ ವಿಡಿಯೋ ಇದೆ ಎಂದು ಹೇಳ್ತಿದ್ದಾರೆ. ಸಂಬಂಧಿಸಿದ ವಿಡಿಯೋ ಹೊಸದೋ ಹಳೇಯದ್ದೊ ಪರಿಶೀಲಿಸಬೇಕು.ಪ್ರತಿಭಟನೆ ಮಾಡುವ ಬಗ್ಗೆ ಅನುಮತಿ ಪಡೆದಿರಲಿಲ್ಲ. ಇಂಟಲಿಜೆನ್ಸ್ ಮಾಹಿತಿ ಮೇರೆಗೆ ಸಿಬ್ಬಂದಿ ನಿಯೋಜನೆ ಮಾಡಲಾಗಿತ್ತು.. ಗಲಾಟೆ ಮಾಡಿದ ಎಲ್ಲಾ ಅರೋಪಿ ಗಳನ್ನು ವಶಕ್ಕೆ ಪಡೆಯಲಾಗಿದೆ.ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# ಭರತನೂರ: ಲಿಂ.ಶ್ರೀ ಗುರುನಂಜೇಶ್ವರ ಮಹಾಶಿವಯೋಗಿಗಳ 32ನೇ ಪುಣ್ಯಸ್ಮರಣೋತ್ಸವ



**ಕಾಳಗಿ:ಫೆ.27:**ಪುರಾಣ–ಪುಣ್ಯ ಕಥೆಗಳಂತಹ ಸಾಂಸ್ಕೃತಿಕ ಚಟುವಟಿಕೆಗಳು ಗ್ರಾಮೀಣ ಪರಂಪರೆ ಉಳಿವಿಗೆ ಸಹಕಾರಿಯಾಗುತ್ತವೆ ಎಂದು ಭರತನೂರ ವಿರಕ್ತ ಮಠದ ಪೂಜ್ಯ ಶ್ರೀ ಚಿಕ್ಕಗುರುನಂಜೇಶ್ವರ ಮಹಾಸ್ವಾಮಿಗಳು ತಮ್ಮ ಆಶೀರ್ವಚನದ ಮೂಲಕ ಸದ್ಭಕ್ತರಿಗೆ ತಿಳಿಸಿದರು.

ತಾಲೂಕಿನ ಭರತನೂರ ಗ್ರಾಮದ ವಿರಕ್ತ ಮಠದ ಆವರಣದಲ್ಲಿ ಪರಮಪೂಜ್ಯ ಮಹಾ ತಪಸ್ವಿ ದಾಸೋಹ ಮೂರ್ತಿ ಲಿಂ.ಶ್ರೀ ಗುರುನಂಜೇಶ್ವರ ಮಹಾಶಿವಯೋಗಿಗಳ 32ನೇ ಪುಣ್ಯಸ್ಮರಣೋತ್ಸವ ನಿಮಿತ್ತವಾಗಿ ಆಯೋಜಿಸಲಾಗಿರುವ ಮುಗಳಖೋಡದ ಸದ್ಗುರು ಯಲ್ಲಾಲಿಂಗ ಮಹಾರಾಜರ ಮಹಾ ಪುರಾಣ ಉದ್ಘಾಟನೆ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಪುರಾಣಗಳು ಭಾರತೀಯ ಪರಂಪರೆಯ ಅಮೂಲ್ಯ ಸಂಪತ್ತು. ಧರ್ಮ, ನೀತಿ, ಭಕ್ತಿ, ಇತಿಹಾಸ ಮತ್ತು ತತ್ವಜ್ಞಾನವನ್ನು ಕಥೆಗಳ ರೂಪದಲ್ಲಿ ಸರಳವಾಗಿ ವಿವರಿಸುತ್ತವೆ ಎಂದರು.

ಕಾಳಗಿ ಹಿರೇಮಠದ ಪೂಜ್ಯ ಶ್ರೀನೀಲಕಂಠ ಮರಿದೇವರು ಕಾರ್ಯಕ್ರಮವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ಗೊಬ್ಬುರ(ಬಿ) ಹಿರೇಮಠದ ಪುರಾಣಿಕ ಶಂಭುಲಿಂಗಯ್ಯ ಶಾಸ್ತ್ರೀಗಳು, ಯಲ್ಲಾಲಿಂಗರ ಮಹಾತ್ಮ, ಧರ್ಮೋಪದೇಶ ಮತ್ತು ಸಮಾಜಮುಖಿ ಮೌಲ್ಯಗಳ ಕುರಿತು ವಿವರಿಸಿದರು.

25-02-2026ರ ಬುಧವಾರ ದಿಂದ ಪ್ರಾರಂಭಗೊಂಡಿರುವ ಪುರಾಣವು 07-03-2026ರ ಶನಿವಾರದ ವರೆಗೆ ನಡೆಯುವ ಸಮಾರಂಭದಲ್ಲಿ ವಿವಿಧ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳು ಸಾಗಿ ಬಂದು, ಕೊನೆಗೆ ಲಿಂ.ಶ್ರೀಗಳ ಪುಣ್ಯಸ್ಮರಣೋತ್ಸವ ಜರುಗಲಿದೆ.

ಕೋಡ್ಲಿ ಜಿಪಂ. ಮಾಜಿ ಸದಸ್ಯ ರಾಮಲಿಂಗರೆಡ್ಡಿ ದೇಶಮುಖ, ರಾಜಾಪೂರ ಗ್ರಾಪಂ.ಅಧ್ಯಕ್ಷ ಪ್ರಕಾಶರೆಡ್ಡಿ ಪೀರೆಡ್ಡಿ, ಯುವ ಮುಖಂಡ ಮುರುಗಯ್ಯಸ್ವಾಮಿ ಭರತನೂರ, ರಾಜಶೇಖರಯ್ಯ ಕಂಬದ, ಗುರುನಂಜಯ್ಯ ಮಠಪತಿ, ಭೋಗಪ್ಪ ಮನ್ನಳ್ಳಿ, ಶಿವರಾಜ ಬುಳ್ಳಾ, ಸೋಮಶೇಖರ ಹಲಚೇರಾ, ಬಸವರಾಜ ಚಿಟ್ಟಾ, ರಾಚಣ್ಣ ರಾಕಾ, ಬಸವರಾಜ ಮಾಲಿಪಾಟೀಲ, ಮಲ್ಲಣ್ಣ ಪಾಟೀಲ, ಅಣವೀರಪ್ಪ ಪೊಲೀಸ್ ಪಾಟೀಲ, ಶಿವಪ್ಪ ಸಜ್ಜನಶೆಟ್ಟಿ, ಮಾಲಗಪ್ಪ ಓಂಕಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಚೇತನ ಕಲಬುರಗಿ ಸಂಗೀತ ಸೇವೆ ಸಲ್ಲಿಸಿದರು.

ಕಲ್ಲೂರ ರೇವಣಸಿದ್ದಪ್ಪ ದೇಸಾಯಿ ತಬಲವಾದಿಸಿದರು.

ಸತೀಶ ಸ್ವಾಮಿನ್ ನಿರೂಪಿಸಿ ವಂದಿಸಿದರು.

# ಸಾರ್ವಜನಿಕ ಉಕ್ಕು ಕಾರ್ಖಾನೆಗಳಿಗೆ ಸಂಡೂರು ಪ್ರದೇಶದಲ್ಲಿ ಹೊಸ ಗಣಿಗಾರಿಕೆ ಬೇಡ

**ಬಳ್ಳಾರಿ, ಫೆ.27:** ಗಣಿಗಾರಿಕೆಗೆ ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರದ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಾಳೆಹೊನ್ನೂರಿನಲ್ಲಿ ನೀಡಿದ ಹೇಳಿಕೆಯನ್ನು ಗಣಿ ಬಾಧಿತ ಪ್ರದೇಶದ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿ ಆಕ್ಷೇಪಿಸಿದೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಮಿತಿಯ ಮುಖಂಡರು. ಸುಪ್ರೀಂ ಕೋರ್ಟ್ ವಾರ್ಷಿಕ 30 ಮಿಲಿಯನ್ ಟನ್ ಅದಿರಿನ ಗಣಿಗಾರಿಕೆಗೆ ಅನುಮತಿ ನೀಡಿತ್ತು. ಇದಕ್ಕಿಂತಲೂ ಹೆಚ್ಚಿಗೆ ನಡೆಯುತ್ತಿರುವಾಗಲೂ. ಯಾರದೋ ಕೆಲವರ ಹಿತಾಸಕ್ತಿಗೆ ಕೆಐಓಸಿಎಲ್ ಮತ್ತು ವಿಎಸ್ ಐಎಲ್ ಗೋಸ್ಕರ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆಗೆ ಕೇಳುವುದು ಸರಿಯಲ್ಲ.

ಅದಿರು ಬೇಕಾದರೆ ಎನ್ ಎಂ ಡಿ ಸಿ ಗಣಿಗಾರಿಕೆ ಪ್ರದೇಶದಿಂದ ಪಡೆಯಲಿ. ಅಭಿವೃದ್ಧಿಗೆ ಪೂರಕವಾಗಿ ಗಣಿಗಾರಿಕೆ ಇರಲಿ. ಆದರೆ ಪ್ರಕೃತಿ ಯನ್ನು ನಾಶ ಮಾಡುವ ಗಣಿಗಾರಿಗೆ ಅಪಾಯಕಾರಿ ಅದಕ್ಕಾಗಿ ನಮ್ಮ ವಿರೋಧ ಎಂದರು. ಉತ್ತಮ ರಾಜಕಾರಣಿಯಾಗಿರುವ ಕುಮಾರಸ್ವಾಮಿ ಅವರು ಸರಕಾರಿ ಸ್ವಾಮ್ಯದ ಕಂಪನಿಗಳಿಗೆ ಗಣಿಗಾರಿಕೆ ಕೇಳುವುದು ಸರಿ ಆದರೆ, ಅದಿರನ್ನು ಕೇಂದ್ರ ಸ್ವಾಮ್ಯದ




ಎನ್.ಎಂ.ಡಿ.ಸಿ. ಯಿಂದ ಪಡೆಯಲಿ ಎಂದು ಶ್ರೀಶೈಲ ಆಲದಹಳ್ಳಿ ಆಗ್ರಹಿಸಿದರು. ಜೊತೆಗೆ ಎನ್.ಎಂ.ಡಿ.ಸಿ ಕುಡುತಿನಿಯಲ್ಲಿ ಕೈಗಾರಿಕೆ ಆರಂಭಿಸಲು ಪಡೆದಿರುವ ಜಮೀನಿನಲ್ಲಿ ಉಕ್ಕು ಕಾರ್ಖಾನೆ ಆರಂಭಿಸಲಿ ಎಂದರು.ಕುಮಾರಸ್ವಾಮಿ ಅವರು ಕೆಐಓಸಿಎಲ್ ಹೆಸರಲ್ಲಿ ಹೊಸದಾಗಿ ಗಣಿಗಾರಿಕೆ ಪಡೆದು ನಂತರ ಖಾಸಗಿಯವರಿಗೆ ನೀಡುವ ಹುನ್ನಾರ ಇದೆ ಎಂದು ಆರೋಪಿಸಿದರು.ಸಮಿತಿಯ ಮುಖಂಡರುಗಳಾದ ಉಗ್ರ ನರಂಸಿಂಹೇಗೌಡ, ಶ್ರೀಶೈಲ ಆಲದಹಳ್ಳಿ, ಟಿ.ಎಂ.ಶಿವಕುಮಾರ್, ಕೆ.ಸೋಮಶೇಖರಗೌಡ, ಎಂ.ಎಲ್.ಕೆ.ನಾಯ್ಡು, ನಾಯ್ಡು , ನಾಗರಾಜ್, ಮೂಲಿಮನೆ ಈರಣ್ಣ ಮೊದಲಾದವರು ಇದ್ದರು.

# ಅದ್ದೂರಿಯಾಗಿ ಹಾರಕೂಡ ಶ್ರೀ ಚನ್ನಬಸವ ಶಿವಯೋಗಿಗಳ ಭವ್ಯ ರಥೋತ್ಸವ



**ಚಿಂಚೋಳಿ :ಫೆ.27:**ಪಟ್ಟಣದ ಪಂಚಲಿಂಗೇಶ್ವರ ಬುಗ್ಗಿ ಹತ್ತಿರ ವಿರುವ ರಥ ಮೈದಾನದಲ್ಲಿ
ಪರಮ ಪೂಜ್ಯ ಲಿಂಗೈಕ್ಯ ಸದ್ಗುರು ಹಾರಕೂಡ ಶ್ರೀ ಚನ್ನಬಸವ ಶಿವಯೋಗಿಗಳವರ 75ನೇ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಪರಮ ಪೂಜ್ಯ ಶ್ರೀ ಹಾರಕೂಡ ಡಾ. ಚನ್ನವೀರ ಶಿವಾಚಾರ್ಯರ ದಿವ್ಯ ನೇತೃತ್ವದಲ್ಲಿ ರಥೋತ್ಸವ ಮತ್ತು ಶಿವಾನುಭವ ಚಿಂತನ ಕಾರ್ಯಕ್ರಮವು ಜರುಗಿತು ಕಾರ್ಯಕ್ರಮವನ್ನು ಹುಬ್ಬಳ್ಳಿಯ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಡಾ. ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು, ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು ಕಾರ್ಯಕ್ರಮ ಉದ್ದೇಶಿಸಿ ಬೀದರ್ ಲೋಕಸಭಾ ಸದಸ್ಯರಾದ ಸಾಗರ್ ಖಂಡ್ರೆ, ಅವರು ಮಾತನಾಡಿ ಪರಮ ಪೂಜ್ಯ ಲಿಂಗೈಕ್ಯ ಸದ್ಗುರು ಹಾರಕೂಡ ಶ್ರೀ ಚನ್ನಬಸವ ಶಿವಯೋಗಿಗಳವರ 75ನೇ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜೊತೆಗೆ ಈ ಜಾತ್ರೆಯಲ್ಲಿ ಹಿರಿಯರು ತಾಯಂದಿರು ಜನಸಾಗರ ಹರಿ ಬಂದಿದೆ ಆದರೆ ಬಹಳಷ್ಟು ಯುವಕರು ಕೊರತೆ ಎದ್ದು ಕಾಣುತ್ತಿದ್ದು ಇನ್ನ ಹೆಚ್ಚಿನಲ್ಲಿ ಈ ಜಾತ್ರೆಯಲ್ಲಿ ಯುವಕರು ಜಾತ್ರೆಗೆ ಬರಬೇಕಿತ್ತು ಏಕೆಂದರೆ ಈ ಹಿಂದಿನ ಯುವಕರು ಬಹಳಷ್ಟು ದುಷ್ಟ ಚಟಗಳಿಗೆ ಒಳಗಾಗುತ್ತಿದ್ದಾರೆ ಶರೀಫ್ ನಶೆ ಮತ್ತು ಬೆಟ್ಟಿಂಗ್ ಐಪಿಎಲ್ ಮತ್ತು ಅನೇಕ ದುಶ್ಚಟಕ್ಕೆ ಒಳಗಾಗಿ ಯುವಕರು ದಾರಿ ತಪ್ಪಿ ಯುವಕರು ತಮ್ಮ ಜೀವನವನ್ನೇ ಹಾಳು ಮಾಡುತ್ತಿದ್ದಾರೆ ಮತ್ತು ಅನೇಕ ಯುವಕರು ಊರು ಬಿಟ್ಟು ಹೋಗಿ ಮತ್ತು ಆತ್ಮಹತ್ಯೆ ಕೂಡ ಮಾಡಿಕೊಳ್ಳುತ್ತಿದ್ದಾರೆ ಅದಕ್ಕಾಗಿ ನಾವು ಏನಾದರೂ ಸುಧಾರಣೆ ಮಾಡಬೇಕಾದರೆ ಇಂಥ ಧಾರ್ಮಿಕ ಸ್ಥಳದಿಂದಲೇ ಸಾಧ್ಯ ಇಂಥ ಗುರುಗಳೆಂದರೆ ಸಾಧ್ಯ ಮುಂಬರುವ ದಿನಗಳಲ್ಲಿ ಪರಮ ಪೂಜ್ಯ ಶ್ರೀ ಹಾರಕೂಡ ಡಾ. ಚನ್ನವೀರ ಶಿವಾಚಾರ್ಯರ ಅವರ ಮಾರ್ಗದರ್ಶನದಲ್ಲಿ ಎಲ್ಲಾ ಯುವಕರು ದುಶ್ಚಟಗಳನ್ನು ಬಿಟ್ಟು ಒಳ್ಳೆಯ ದಾರಿಯಲ್ಲಿ ನಡೆಯಬೇಕು ಮತ್ತು ಎಲ್ಲ ಯುವಕರು ತಂದೆ ತಾಯಿಯ ಗೌರವ ಕೊಡಬೇಕು ಒಳ್ಳೆ ಸಂಸ್ಕೃತಿ ಯುವಕರು ಕಲಿಯಬೇಕು ಎಂದು ಹೇಳಿದರು ಇದೇ ಸಂದರ್ಭದಲ್ಲಿ ಚಿಂಚೋಳಿ ಶಾಸಕರಾದ ಡಾ. ಅವಿನಾಶ್ ಜಾಧವ್, ಅವರು ಮಾತನಾಡಿ ಬಸವಕಲ್ಯಾಣ ತಾಲೂಕಿನ ಹಾರಕೂಡ ನಲ್ಲಿ ಯಾ ರೀತಿ ಜಾತ್ರೆಯಾಗುತ್ತೋ ಅದೇ ಜಾತ್ರೆ ಚಿಂಚೋಳಿಯಲ್ಲಿ ಕೂಡ ಅದ್ದೂರಿಯಾಗಿ ಜರುಗುತ್ತಿದ್ದು ನಾವೆಲ್ಲರೂ ಪುಣ್ಯವಂತರೆಂದು ಭಾವಿಸುತ್ತೇವೆ ಹಾರಕೂಡ ಶ್ರೀಗಳು ಮಠದಲ್ಲಿ ಯಾವುದೇ ಒಂದು ಜಾತಿಯತೆ ಇಲ್ಲ ನಾವೆಲ್ಲರೂ ಒಂದೇ ಅಂತೆ ಎಲ್ಲಾ ಸಮಾಜ ಒಗ್ಗೂಡಿಸಿ ಈ ಜಾತ್ರೆಯು ಯಶಸ್ವಿಯಾಗಿ ಮಾಡುತ್ತಿದ್ದಾರೆ ಎಂದು ಹೇಳಿದರು ಕಾರ್ಯಕ್ರಮದಲ್ಲಿಹಾರಕೂಡ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು, ಹಿರನಾಗಂವ ಪರಮಪೂಜ್ಯ ಶ್ರೀ ಜಯಶಾತಲಿಂಗ ಮಹಾ ಸ್ವಾಮೀಜಿಗಳು, ಕಾಂಗ್ರೆಸ್ ಪಕ್ಷದ ಮುಖಂಡರಾದ ಸುಭಾಷ್ ರಾಠೋಡ್, ಕಾಡ ಅಧ್ಯಕ್ಷರಾದ ಹೊನ್ನು ನಾಯಕ, ಸಾಹಿತಿ ಡಾ.ಎಸ್.ಎಂ.ಹಿರೇಮಠ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗೌತಮ ಪಾಟೀಲ್, ಮುಖಂಡರಾದ ಅಜೀತ್ ಪಾಟೀಲ್, ಶಿವಯೋಗಿ ರುಸ್ತಂಪೂರ್, ಅಶೋಕ ವೊಗದಂಪುರ, ಕೆ ಎಂ ಬಾರಿ, ಸುಭಾಷ ಸೀಳಿನ, ಗೋಪಾಲರಾವ್ ಕಟ್ಟಿಮನಿ, ಸಂತೋಷ ಗಡಂತಿ, ಶರಣುಪಾಟೀಲ ಮೋತಕಪಳ್ಳಿ, ರಾಜು ಪವಾರ, ಪ್ರೇಮಸಿಂಗ್ ಜಾಧವ, ನೀಲಕಂಠ ಸೀಳಿನ, ವಿನೋದ ಸೀಳಿನ, ಸತೀಶ್ ರೆಡ್ಡಿ, ರಾಜಶೇಖರ ಮಜ್ಜಗಿ, ಮಲ್ಲಿಕಾರ್ಜುನ್ ಪಾಲಾಮೂರ, ಭೀಮಶೆಟ್ಟಿ ಮುರುಡಾ, ಮಲ್ಲಿಕಾರ್ಜುನ ಅಲ್ಲಾಪೂರ, ಸಂಗಮೇಶ ಮೂಲಿಮನಿ, ಅಪ್ಪಣ್ಣ ಹಾರಕೂಡ, ಸಂತೋಷ ಕಡಗದ, ವೀರೇಶ ಯಂಪಳ್ಳಿ, ನಾಗರಾಜ ಸೀಳಿನ್, ಅಮರ ಲೋಡ್ನೂರ್, ನಾಗರಾಜ ಮಲಕೂಡ, ಮತ್ತು ಅನೇಕ ಸಾವಿರಾರು ಜನಸಂಖ್ಯೆಯುಲ್ಲಿ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿದ್ದರು

# ರೇಣುಕಾಚಾರ್ಯರ ಜಯಂತೋತ್ಸವ ಮಾ. 1ಕ್ಕೆ ಮಹಾ ರಥೋತ್ಸವ

**ಕಾಳಗಿ:ಫೆ.27:**ಚಿಂಚೋಳಿ ಮತಕ್ಷೇತ್ರದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕಲ್ಯಾಣ ಕರ್ನಾಟಕದ ಕೈಲಾಸ ಶ್ರೀಕ್ಷೇತ್ರ ರೇವಗ್ಗಿ(ರಟಕಲ್)ಗ್ರಾಮದ ಆರಾಧ್ಯ ದೈವನಾದ ಜಗದ್ಗುರು ಶ್ರೀರೇವಣಸಿದ್ದೇಶ್ವರರ ದೇವಸ್ಥಾನದಲ್ಲಿ ಶ್ರೀ ರೇಣುಕಾಚಾರ್ಯರ ಜಯಂತೋತ್ಸವ ನಿಮಿತ್ತ ಬರುವ 1ನೇ ಮಾರ್ಚ್-2026ರ ಭಾನುವಾರ ಭಕ್ತಿ-ಭಾವ ಹಾಗೂ ಸಂಭ್ರಮದಿಂದ ಜಗದ್ಗುರುಗಳ ಮಹಾ ರಥೋತ್ಸವ ಜರುಗಲಿದೆ ಎಂದು
ಸೇಡಂಸಹಾಯಕ ಆಯುಕ್ತ ಹಾಗೂ ದೇವಸ್ಥಾನದ ಆಡಳಿತಾಧಿಕಾರಿಯೂ ಆಗಿರುವ ಪ್ರಭುರೆಡ್ಡಿ ಮತ್ತು ದೇವಸ್ಥಾನ ಕಾರ್ಯದರ್ಶಿ ಸದಾಶಿವ ವಗ್ಗೆ ತಿಳಿಸಿದ್ದಾರೆ.

ಶ್ರೀರೇಣುಕರ ಜಯಂತೋತ್ಸವ ಪ್ರಯುಕ್ತ ದಿನಾಂಕ:28-02-2026ರ ಶನಿವಾರ ರಾತ್ರಿ 09-00ಗಂಟೆಯಿಂದ ಬೆಳಗಿನ ಜಾವದ ವರೆಗೆ ಆಕಾಶವಾಣಿ ಕಲಾವಿದರಿಂದ ವಿಶೇಷ ಸಂಗೀತ, ಭಜನೆ ನೆರವೇರಲಿದ್ದು, 1ನೇ ಮಾರ್ಚ್-2026ರ ಭಾನುವಾರ ಬೆಳಿಗ್ಗೆ ಅಮೃತ ಸಿದ್ಧಿಯೋಗದಲ್ಲಿ ಜಗದ್ಗುರು ಶ್ರೀರೇಣುಕಾಚಾರ್ಯರ ತಪೊ ಗದ್ದುಗೆಯಲ್ಲಿರುವ ಮೂರ್ತಿಗೆ ರುದ್ರಾಭೀಷೇಕ, ಧಾರಾಭೀಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ ನಡೆದು, ಬೆಳಿಗ್ಗೆ 08-00ಯಿಂದ ದೀಕ್ಷಾ, ಕಳಸಾರೋಹಣ ಹಾಗೂ ಜಂಗಮ ವಟುಗಳಿಗೆ ಅಯ್ಯಾಚಾರ, ತೊಟ್ಟಲೋತ್ಸವ ನಡೆಸಿ ನಂತರ ಮಹಾ ಪ್ರಸಾದ ವಿತರಿಸಲಾಗುವುದು.

ಸಾಯಂಕಾಲ 05-00ಕ್ಕೆ ಭವ್ಯ ನಂದಿಕೋಲು ಮತ್ತು ಸಕಲ



ವಾಧ್ಯಮೇಳದೊಂದಿಗೆ ಜಗದ್ಗುರು ರೇಣುಕರ "ಭವ್ಯ ರಥೋತ್ಸವ" ಜರುಗಲಿದ್ದು, ರಾಜ್ಯ, ಅಂತರಾಜ್ಯ, ವಿವಿಧ ಜಿಲ್ಲೆ, ತಾಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಆಗಮಿಸಿ, ಜಗದ್ಗುರು ಶ್ರೀ ರೇವಣಸಿದ್ದೇಶ್ವರರ ಕೃಪೆಗೆ ಪಾತ್ರರಾಗಬೆಕೆಂದು ತಿಳಿಸಿದ್ದಾರೆ.

# ವಾಡಿ ಬಿಜೆಪಿ ಕಛೇರಿಯಲ್ಲಿ ಸಾವರ್ಕರ್ ಸ್ಮರಣೆ



**ವಾಡಿ:ಫೆ.27:** ಪಟ್ಟಣದ ಬಿಜೆಪಿ ಕಛೇರಿಯಲ್ಲಿ ವೀರ ಸಾವರ್ಕರ್ ರ 60ನೇ ಪುಣ್ಯ ಸ್ಮರಣೆ ಪ್ರಯುಕ್ತ ಅವರ ಭಾವಚಿತ್ರಕ್ಕೆ ಮುಖಂಡರು ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ಬಿಜೆಪಿ ಅಧ್ಯಕ್ಷ ವೀರಣ್ಣ ಯಾರಿ ಅವರು ಮಾತನಾಡಿ ವಿನಾಯಕ ದಾಮೋದರ್ ಸಾವರ್ಕರ್ ಹೆಸರು ಕೇಳಿದರೆ ಈಗಲೂ ನಮ್ಮ ಮೈ ಮನ ರೋಮಾಂಚನಗೊಳ್ಳುತ್ತದೆ,ಅವರು ನಮ್ಮ ಸ್ವಾಭಿಮಾನದ ಸರ್ವಸ್ವ ಎಂದರು.
ತಮ್ಮ ಜೀವನವನ್ನು ಸ್ವಾತಂತ್ರಕ್ಕಾಗಿ ಮುಡಿಪಾಗಿಟ್ಟ ಮಹಾನ್ ನಾಯಕ. ಸ್ವಾತಂತ್ರ್ಯ ಹೋರಾಟ,ಹಿಂದುತ್ವದ ಬಗ್ಗೆ ತೆಗೆದುಕೊಂಡ ನಿಲುವುಗಳು ಈಗಲೂ ಈ ಮಣ್ಣಿನ ಯುವಕರಿಗೆ ಸ್ಫೂರ್ತಿದಾಯಕ.
ತಾಯಿ-ತಂದೆಯನ್ನು ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡರು ಎದೆಗುಂದದೆ ವಿದ್ಯಾಭ್ಯಾಸಕ್ಕೆ ಹೆಚ್ಚು ಮೊರೆ ಹೋದ ಸಾವರ್ಕರ್ ಅವರು,ಅಂದು ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚ್ಚಿಸುವಲ್ಲಿ ಪ್ರಚಲಿತವಿದ್ದ ಲೋಕಮಾನ್ಯ ಬಾಲ ಗಂಗಾಧರ್ ತಿಲಕ್ ಅವರ ಕೇಸರಿ ಪತ್ರಿಕೆಯು ಅವರಿಗೆ ಗಾಢವಾಗಿ ಪ್ರಭಾವ ಬೀರಿತು.

ಮುಂದೆ ವಿದ್ಯಾಭ್ಯಾಸಕ್ಕಾಗಿ ಲಂಡನ್‌ಗೆ ತೆರಳಿದರು.ಇನ್ನೂ ಕಾನೂನು ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಮೊದಲ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಸಾವರ್ಕರ್ ಪಾತ್ರರಾಗಿದ್ದರು.ಆದರೆ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆಯ ಪ್ರಮಾಣ ವಚನ ಸ್ವೀಕರಿಸಲು ನೀರಾಕರಿಸಿದ್ದಕ್ಕೆ ವಕೀಲ ಬಿರುದು ನೀಡಲಿಲ್ಲ. ಲಂಡನ್‌ನಲ್ಲಿದ್ದಾಗ ಸ್ವತಂತ್ರ ಭಾರತ ಸಮಾಜ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಸಾವರ್ಕರ್ ಅವರ ಚಟುವಟಿಕೆಗಳನ್ನು ಗಮನಿಸಿದ ಬ್ರಿಟಿಷ್ ಸರ್ಕಾರ 1910 ರಂದು ಲಂಡನ್‌ನಲ್ಲಿ ಅವರನ್ನು ಬಂಧಿಸಿದರು. ಹಡುಗಿನ ಮೂಲಕ ಸಾವರ್ಕರ್ ಅವರನ್ನು ಭಾರತಕ್ಕೆ ಕರೆತರಲಾಯಿತು. ಮೋರ್ಸಿಲ್ಲೆಸ್ ಬಂದರಿನಲ್ಲಿ ಹಡಗು ಬಂದು ನಿಂತಾಗ ಸಮುದ್ರಕ್ಕೆ ಹಾರಿದ್ದ ಸಾವರ್ಕರ್, ಈಜಿ ದಡ ಸೇರಿದ್ದರು. ನಂತರ ಫ್ರೆಂಚ್ ಪೊಲೀಸರಿಗೆ ಶರಣಾಗಿದ್ದರು.ನಂತರ ಸಾವರ್ಕರ್ ಅವರನ್ನು ಅಂಡಮಾನ್‌ನ ಕಾಲಾಪಾನಿನಲ್ಲಿನ ಜೈಲಿನಲ್ಲಿ ಇಡಲಾಯಿತು. ಇಲ್ಲಿ 600ಕ್ಕೂ ಹೆಚ್ಚು ಸ್ವಾತಂತ್ರ್ಯ ಸೇನಾನಿಗಳಿಗೆ ತೀವ್ರ ರೂಪದ ಶಿಕ್ಷೆ ನೀಡಿ ಸಾವಿಗೆ ದುಡಿದಿದ್ದಾರೆ. 1921 ರಲ್ಲಿ ಸಾವರ್ಕರ್ ಅವರನ್ನ ಕಾಲಾಪಾನಿ ಜೈಲ್‌ನಿಂದ ರತ್ನಗಿರಿ ಜೈಲಿಗೆ ಕಳುಹಿಸಲಾಯಿತು. 1937ರಲ್ಲಿ ಅವರು ಜೈಲಿನಿಂದ ಬಿಡುಗಡೆಯಾದರು. ನಂತರ ಮತ್ತೇ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡರು

ಗಾಂಧಿ ಹತ್ಯೆಯಲ್ಲಿ ಒಂದೊಮ್ಮೆ ಹಿಂದೂ ಮಹಾಸಭೆಯ ಅಧ್ಯಕ್ಷನಾಗಿದ್ದ ಸಾವರ್ಕರ್‌ನ ಪಾತ್ರವೂ ಇದೆ ಎನ್ನುವ ಆಪಾದನೆಯಿಂದ ಸಾಕಷ್ಟು ಮನನೊಂದ ವೀರ ತಮ್ಮ 83ನೇ ವಯಸ್ಸಿನಲ್ಲಿ 1966ರ ಫೆಬ್ರವರಿ 1ರಂದು ಆಮರಣಾಂತ ಉಪಾವಾಸ ಕೈಗೊಂಡು ಫೆ. 26 ರಂದು ದೇಹತ್ಯಾಗ ಮಾಡಿ ಅಮರರಾದರು. ಸಮವಸ್ತ್ರ ಧರಿಸಿದ 2500 ಸ್ವಯಂಸೇವಕರಿಂದ ಗೌರವ ಪಡೆದ ಏಕೈಕ ಸ್ವಾತಂತ್ರ್ಯ ಯೋಧ ವೀರ ಸಾವರ್ಕರ್,ಅದಕ್ಕಾಗಿ ಅವರು ಇಂದಿಗೂ ನಮ್ಮ ಸ್ವಾಭಿಮಾನದ ಸರ್ವಸ್ವ ವಾಗಿದ್ದಾರೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ರವಿ ನಾಯಕ, ಇಂಗಳಗಿ ಶಕ್ತಿ ಕೇಂದ್ರದ ಅಧ್ಯಕ್ಷ ಸೋಮು ಚವ್ಹಾಣ,ಯುವ ಮೂರ್ಚಾ ಅಧ್ಯಕ್ಷ ಭಾಗಣ್ಣ ದೊರೆ,ತಾಲ್ಲೂಕು ಎಸ್ ಸಿ ಮೂರ್ಚಾ ಪ್ರಧಾನ ಕಾರ್ಯದರ್ಶಿ ಕಿಶನ ಜಾಧವ,
ಮುಖಂಡರಾದ ಶರಣಗೌಡ ಚಾಮನೂರ,ಗಿರಿಮಲ್ಲಪ್ಪ ಕಟ್ಟಿಮನಿ,ರವೀಂದ್ರ ನಾಯಕ,ಅಂಬದಾಸ ಜಾಧವ,ಕುಮಾರ ಜಾಧವ,ಬಸವರಾಜ ಹೇಮಾನಿ,ಹೀರಾಸಿಂಗ ರಾಠೋಡ,ರಂಗಪ್ಪ ದೊರೆ,ಚಂದರ ಚವ್ಹಾಣ, ಮಲ್ಲಿಕಾರ್ಜುನ ಪುಜಾರಿ ಸೇರಿದಂತೆ ಇತರರು ಇದ್ದರು.

# ಸಾರ್ವಜನಿಕ ಉಕ್ಕು ಕಾರ್ಖಾನೆಗಳಿಗೆ ಸಂಡೂರು ಪ್ರದೇಶದಲ್ಲಿ ಹೊಸ ಗಣಿಗಾರಿಕೆ ಬೇಡ



**ಬಳ್ಳಾರಿ, ಫೆ.27:** ಗಣಿಗಾರಿಕೆಗೆ ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರದ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಾಳೆಹೊನ್ನೂರಿನಲ್ಲಿ ನೀಡಿದ ಹೇಳಿಕೆಯನ್ನು ಗಣಿ ಬಾಧಿತ ಪ್ರದೇಶದ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿ ಆಕ್ಷೇಪಿಸಿದೆ.
ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಮಿತಿಯ ಮುಖಂಡರು. ಸುಪ್ರೀಂ ಕೋರ್ಟ್ ವಾರ್ಷಿಕ 30 ಮಿಲಿಯನ್ ಟನ್ ಅದಿರಿನ ಗಣಿಗಾರಿಕೆಗೆ ಅನುಮತಿ ನೀಡಿತ್ತು. ಇದಕ್ಕಿಂತಲೂ ಹೆಚ್ಚಿಗೆ ನಡೆಯುತ್ತಿರುವಾಗಲೂ. ಯಾರದೋ ಕೆಲವರ ಹಿತಾಸಕ್ತಿಗೆ ಕೆಐಓಸಿಎಲ್ ಮತ್ತು ವಿಎಸ್ ಐಎಲ್ ಗೋಸ್ಕರ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆಗೆ ಕೇಳುವುದು ಸರಿಯಲ್ಲ.
ಅದಿರು ಬೇಕಾದರೆ ಎನ್ ಎಂ ಡಿ ಸಿ ಗಣಿಗಾರಿಕೆ ಪ್ರದೇಶದಿಂದ ಪಡೆಯಲಿ. ಅಭಿವೃದ್ಧಿಗೆ ಪೂರಕವಾಗಿ ಗಣಿಗಾರಿಕೆ ಇರಲಿ. ಆದರೆ ಪ್ರಕೃತಿ ಯನ್ನು ನಾಶ ಮಾಡುವ ಗಣಿಗಾರಿಗೆ ಅಪಾಯಕಾರಿ ಅದಕ್ಕಾಗಿ ನಮ್ಮ ವಿರೋಧ ಎಂದರು.ಉತ್ತಮ ರಾಜಕಾರಣಿಯಾಗಿರುವ ಕುಮಾರಸ್ವಾಮಿ ಅವರು ಸರಕಾರಿ ಸ್ವಾಮ್ಯದ ಕಂಪನಿಗಳಿಗೆ ಗಣಿಗಾರಿಕೆ ಕೇಳುವುದು ಸರಿ ಆದರೆ, ಅದಿರನ್ನು ಕೇಂದ್ರ ಸ್ವಾಮ್ಯದ ಎನ್.ಎಂ.ಡಿ.ಸಿ. ಯಿಂದ ಪಡೆಯಲಿ ಎಂದು ಶ್ರೀಶೈಲ ಆಲದಹಳ್ಳಿ ಆಗ್ರಹಿಸಿದರು. ಜೊತೆಗೆ ಎನ್.ಎಂ.ಡಿ.ಸಿ ಕುಡುತಿನಿಯಲ್ಲಿ ಕೈಗಾರಿಕೆ ಆರಂಭಿಸಲು ಪಡೆದಿರುವ ಜಮೀನಿನಲ್ಲಿ ಉಕ್ಕು ಕಾರ್ಖಾನೆ ಆರಂಭಿಸಲಿ ಎಂದರು.ಕುಮಾರಸ್ವಾಮಿ ಅವರು ಕೆಐಓಸಿಎಲ್ ಹೆಸರಲ್ಲಿ ಹೊಸದಾಗಿ ಗಣಿಗಾರಿಕೆ ಪಡೆದು ನಂತರ ಖಾಸಗಿಯುವರಿಗೆ ನೀಡುವ ಹುನ್ನಾರ ಇದೆ ಎಂದು ಆರೋಪಿಸಿದರು.ಸಮಿತಿಯ ಮುಖಂಡರುಗಳಾದ ಉಗ್ರ ನರಂಸಿಂಹೇಗೌಡ, ಶ್ರೀಶೈಲ ಆಲದಹಳ್ಳಿ, ಟಿ.ಎಂ.ಶಿವಕು ಮಾರ್, ಕೆ.ಸೋಮಶೇಖರಗೌಡ, ಎಂ.ಎಲ್.ಕೆ.ನಾಯ್ಡು, ನಾಯ್ಡು , ನಾಗರಾಜ್, ಮೂಲಿಮನೆ ಈರಣ್ಣ ಮೊದಲಾದವರು ಇದ್ದರು.

# ಸ್ವಾತಂತ್ರ್ಯ ಹೋರಾಟದ ಪ್ರಮುಖ ಕ್ರಾಂತಿಕಾರಿ ನಾಯಕ ಚಂದ್ರಶೇಖರ ಆಜಾದ್



**ಕಲಬುರಗಿ :ಫೆ.27:** "ದುಷ್ಮನೋಂಕಿ ಗೋಲಿಯೂಂಕಾ ಸಾಮನಾ ಹಮ್ ಕರೆಂಗೇ, ಆಜಾದ್ ಹೀ ರಹೇಂಗೆ, ಆಜಾದ್ ಹೀ ರಹೇಂಗೇ" ಎಂಬ ಪ್ರತಿಜ್ಞೆಯೊಂದಿಗೆ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡಿದ್ದ ಚಂದ್ರಶೇಖರ ಆಜಾದ್ ಅವರು ದೇಶದ ಸ್ವಾತಂತ್ರ್ಯದ ಪ್ರಮುಖ ಕ್ರಾಂತಿಕಾರಿ ಹೋರಾಟಗಾರರಾಗಿದ್ದಾರೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು. ನಗರದ ಆಳಂದ ರಸ್ತೆಯ ಸಂತೋಷ ಕಾಲನಿ ಕ್ರಾಸ್ ಸಮೀಪದ 'ರಿಪಬ್ಲಿಕ್ ಸ್ಪೋಕನ್ ಇಂಗ್ಲೀಷ್ ಅಕಾಡೆಮಿ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಚಂದ್ರಶೇಖರ ಆಜಾದ್ ಅವರ 95ನೇ ಹುತಾತ್ಮ ದಿನಾಚರಣೆ'ಯಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿ, ಅವರು ಮಾತನಾಡುತ್ತಿದ್ದರು. ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಮುನ್ನಡೆಸಿದ ಅವರು, 1931ರಲ್ಲಿ ಅಲಹಾಬಾದ್‌ನ ಆಲ್ಫ್ರೆಡ್ ಪಾರ್ಕನಲ್ಲಿ ಶರಣಾಗದೆ ಸ್ವತಃ ಗುಂಡು ಹಾರಿಸಿಕೊಂಡು ಹುತಾತ್ಮರಾದರು. ನನ್ನ ಹೆಸರು 'ಆಜಾದ್' ಇದೆ ಎಂದು ಬ್ರಿಟಿಷರ ವಿರುದ್ಧ ಹೋರಾಡಿ, ದೇಶಕ್ಕಾಗಿ ವೀರ ಮರಣನಪ್ಪಿದ ಮಹಾನ್ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ. ಅವರ ದೇಶಪ್ರೇಮ ಮಾದರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ದತ್ತು ಹಡಪದ, ಸಮಾಜ ಹಾಗೂ ಬಳಗದ ಗೌರವ ಸಲಹೆಗಾರ ಸೇವಕ ಶಿವನ ಎಸ್. ಬಿರಾದಾರ ಹಾಗೂ ವಿದ್ಯಾರ್ಥಿಗಳು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE